SRI K. H. RANGANATH.—The question raised on the floor of the House, the other day, was that at what particular point of time there should be interference of Government, may be the notice given may not be in tune with the section, but the very intention of the Government in asking the particular authority to perform a particuler function was questioned. At this stage shou'd the Government or any ference administeration, as a matter of fact, tolerate judicial interernce at that particular point of time ? It is this section that has given lot of scope for the Court now-a-days. We are in a welfare State and we have to take up several measures and when the Government thinks that some measures are to be taken up and supposing at every point of time the mattres are taken to the Court and the Court interfers then what should be the position ?

SRI. K. PUTTASWAMY.—I have been a Member of this House for 24 years, and it so happened that such a situation had never arisen. The other day, when the Hon. Member, who was in charge of this administration very recently spoke I was not present in this House. So, I do not know what all he has stated. But, from my memory, I can say that the Notice that was issued under Section 86 (1) did not point out any particular duty and the Housing Board was not asked to perform that duty in a particular time. It was sufficiently vague. As I have already stated the relationship between the Government and the Board was not very happy. I wish it had been avoided.

SRI K.H. RANGANATH.—From an academical point of view, we are at a stage that at every point of time the Legislature and the Judiciary are going to be consulted. From that ang'e, let not the hon. member go into the merits of the Notice issued.

MADAM SPEAKER.—The Hon'ble Minister says that the Court interfered. Is he sure that the Court interferes ?

SRI K.H. RANGANATH.—The Court states that it was a Judicial Interference.

MADAM SPEAKER.—They do not voluntarily interfere.

SRI K.H. RANGANATH —We have been functioning within our own limits. This House is supreme in respect of functions, and the Court is also supreme in respect of its Jurisdiction. After all, this is an administrative function. The issue of Notice under Section 86 (1) is the function of the Government, and we issued a Notice. These are all discretionary powers. But, how a lower Court can exercise its

discretionary powers ? Supposing a person takes a matter to the court and the Court were to order stay, we are bound to stay it. All the measures that are taken up are to further our ideas for the welfare of the State. Let the hon. member not make a reference to the Chairman. I have not seen the Notice. But in the given circumstances, in the given case, there was an occasion for the Court to interfere, there was a judicial interference. what is the answer of the hon. member to this aspect of the issue ?

SRI K. PUTTASWAMY.—Instead of answering to the point, I can say, definitely not the present Amending Bill I would have appreciated the Government if they had thought considerably that provisions of Section 86 were adequate to deal with the situation and had come forward with certain amendments, even with retrospective effect for Section 86. Instead of doing so, they have left Section 86 untouched. What does that mean ? That means they are never satisfied with Section 86. If they had said that the provision of Section 86 was adequate, they should have come forward with certain amendments. Now that the Government have not tabled any amendment to Section 86, I infer that Government are satisfied with the present provision of Section 86. Instead of thinking in a constructive manner and proposing certain amendments to Section 86, they have tried to take away the powers of the Board, they have tried to reduce the Board to a very helpless institition I am only trying to point out that the Government is defeating the very object that it has in its mind. They want the Board to function effectively, but they have made it ineffective. Therefore if they have got any distress in their mind about the ability of the Housing Board to discharge these functions I would advise the Government to do away with this Board and take over the functions departmentally, and I am sure with the experience that the Hon' ble Minister is having and with anxiety that he is evincing in trying to creat housing facilities for those people who have been denied these facilities for ages, he can do it more effectively and discharge the functions more effenctively. I would say that if they want to retain the Statutory Board, let the Statutory authorities, the authorities envisaged in the Statute, be given definite powers and let the Government have all the supervisory powers that they have But for the one question that the Hon' ble Minister is asking I would like to tell him that these are days–I am very happy–where every man is trying to get justice at the hands of a Court, whether it may be a genuine or imaginary grievance. Are we not come across cases where transfers are challenged in the High Court and transfer orders are stayed ?

SRI K.H. RANGANATH.—But the judicial discretion must also be judicious. We feel that the Courts cannot just behave in the manner in which they feel. Thay have to do their job within the four corners of the law and according to precedents.

SRI. K. PUTTASWAMY.—I agree with the Hon'ble Minister. I have once before pointed out that certain of the matters connected with the Government employees should be taken out of the purview of the High Court and they must be entrusted to Administrative Tribunals. I know it is impossible for the Government to function effctively if every now and then their employees go to the Court.

10-30 A.M.

SRI KAGODU THIMMAPPA.—(Sagar) In this House are we reviewing the proceedings or the judgements of the Judiciary ? The arguments that are going on here are virtually like reviewing the judgement or the way in which the judiciary is functioning. If that being the case I cannot understand how we are competent to review the proceedings of the judiciary.

SRI K.H. RANGANATH.—With great respect to the Hon. member I would like to inform him that I was a practising lawrger ; I have got regard and respect for the judiciary, judges and all that ; but as members of this august House, we have got greater responsibilities. After all judiciary is our own creation ; we provide them money and we provide them all other facilities. Justice should be got not only at the hands of the Government but also at the hands of the judiciary. We have not been reviewing the proceedings of the judiciary but we have got our own responsibility as members of this House...

SRI H.D. DEVE GOWDA.-Judiciary might be our own creation but we cannot go to the extent of characterising the functions of the judiciary. We are stretching too far in this matter.

SRI K.H. RANGANATH.—I am sorry, I am mistaken.

SRI K. PUTTASWAMY. —I have not tried to make any comment on the powers of the judiciary or the way in which they have discharged their responsibilities. I was only pointing out to a larger question. I was saying that it is very difficult for the Government to helplessly go on watching their own employees challening even an order of transfer before the judiciary Then what is the reliefs that are to be given. Supposing the order passed is mala fide, then should not the Government employee have a remedy ? It is correct in asking that question Hon. member Sri Kagodu Thimmappa perhaps did not listen to me carefully. I was pointing out for such a thing, and Administrative Tribunal wil have to be constituted clothing with sufficient powers. This view is shared by quite a large section of the people. I for one would feel very happy if that day dawns soon when our Government servants are not pushed to the necessity of going to advocates paying huge fees to seek justice in a court of law. I would like to state my conception of an Administrative Tribunal also. I do not envisage an Administrative

Tribunal which consists of an IAS Officer or a bureauerat. According to me, I would envi age an Administrative Tribunal consisting of persons of eminence in the law of jurisprudence. Then there would be no difficulty. Then they have just to make an application and state their grievance. They will just examine and if they feel that the grievances are genuine, then they will correct it or else, they will ask him to obey the Government Order. Now what is happening? Even an order passed by the Government-*boua fide* and in public interest, he is challenging in a court of law and the stay orders are granted not for three months but for two years or three years and thus putting the administrative machinery into cold-storage. That should not happen. While I am second to none in safeguarding the rights of the employees, I am very zealous about safegaurding the prestige of the Government also. After all Government functions in public interest. Government is the only institution which can take into consideration all aspects of a problem which can consider sympathetically the grievances of all sections of the people. It has not only to take the grievances of the Government employees into consideration but the grievances of other sections also other sections which are going to be affected by our administration. Therefore I have no hesitation in advocating that the service matters should be taken out of the purview of the High Court and entrusted them to an Administrative Tribunal.

Before I close my speech I would like to request my hon. friend Sri Ranganath, Minister for Transport and Housing, to ponder over a fey suggestions that I have made. I have not made theses suggestions out of any personal considerations. I have tried to approach this question froma very broad point view what should be the nature of a statutory body, what are the powers it should have, and I am also very zealous in trying to see that the Government retains sufficient powers to be able to bring the administration of the statutory bodies under proper control.

With these words I thank the Hon. Chair for showing great indulgence and providing me such much of time on a small Bill.

† ಶ್ರೀ ಹೆಚ್. ಡಿ ದೇವೇಗೌಡ (ಹೊಳೇನರಸೀಪುರ) —ಮಾನ್ಯ ಸಭಾಧ್ಯಕ್ಷಿಣಿಯವರೇ, ಈ ಹೌಸಿಂಗ್ ಬೋರ್ಡ್‌ನ ತಿದ್ದುಪಡಿ ಮಸೂದೆ ಬಗ್ಗೆ ಬಹುಶಃ ಶ್ರೀಮಾನ್ ಪುಟ್ಟಸ್ವಾಮಿಯವರು ಕೊಟ್ಟಂತಹ ಸಲಹೆಗಳನ್ನು ಸರ್ಕಾರ ಅಂಗೀಕರಿಸುವುದಾದರೆ ಇದರ ಬಗ್ಗೆ ಚರ್ಚೆ ಅನಾವಶ್ಯಕ ಎಂದು ನಾನು ತಿಳಿದುಕೊಂಡಿದ್ದೇನೆ. ಬಹುಶಃ ಈ ಮನೆಯ ಹಿರಿಯ ಅನುಭವಿ ಶಾಸಕರಲ್ಲಿ ಅವರೂ ಒಬ್ಬರು, ಅವರು ಈ ಮಾತನ್ನು ಹೇಳಿದ್ದಾರೆ. ಅವರು ೪ ವರ್ಷಗಳ ಕಾಲ ಹೌಸಿಂಗ್ ಮಿನಿಸ್ಟರ್ ಆಗಿ ಕೆಲಸ ಮಾಡಿದಂಥ ಅನುಭವದಲ್ಲಿ ಇಂಥ ತಿದ್ದುಪಡಿ ತರತಕ್ಕಂಥ ಅವಶ್ಯಕತೆ ನನಗಂತೂ ಕಂಡು ಬರಲಿಲ್ಲ ಎಂದು ಮತ್ತು ಈಗ ಬದಲಾವಣೆ ಆಗಿರತಕ್ಕಂಥ ಪರಿಸ್ಥಿತಿಯಲ್ಲಿ ಇದರ ಅವಶ್ಯಕತೆ ಇಲ್ಲ ಎನ್ನುವುದನ್ನು ಹೇಳಿದ್ದಾರೆ. ಅದೂ ಅಲ್ಲದೆ ಸರ್ಕಾರಕ್ಕೆ ಒಂದು ವೇಳೆ ಏನಾದರೂ ತಿದ್ದುಪಡಿ ಅವಶ್ಯಕವಾಗಿ ಬೇಕು ಎಂದು ಎನಿಸಿದರೆ ಒಂದು ಸಮಗ್ರವಾದ ತಿದ್ದುಪಡಿ ತರತಕ್ಕಂಥದಕ್ಕೆ ನನ್ನದೇನೂ ಅಡ್ಡಿ ಇಲ್ಲ ಇದನ್ನು ಹಿಂದಕ್ಕೆ ತೆಗೆದುಕೊಳ್ಳುವುದು ಒಳ್ಳೆಯದು ಎಂದು ಬುದ್ಧಿವಾದ ಹೇಳಿದ್ದಾರೆ ಇದನು ನೀವು ಸ್ವೀಕಾರ ಮಾಡುವುದಾದರೆ ನಾನೂ ಕೂಡ ಅದಕ್ಕೆ ಬೆಂಬಲ ಸೂಚಿಸುವುದಕ್ಕೆ ಸಿದ್ಧನಾಗಿದ್ದೇನೆ ನಾನು ಇಷ್ಟು ಹೇಳಿ ಇನ್ನು ಪ್ರತಿಯೊಂದು ತಿದ್ದುಪಡಿಯಲ್ಲಿ ಏನು ಸೂಚಿಸಿದ್ದಾರೋ ಅದನ್ನು ಮತ್ತೆ ಪ್ರಸ್ತಾಪ ಮಾಡುವುದಕ್ಕೆ

(ಶ್ರೀ ಹೆಚ್. ಡಿ. ದೇವೇಗೌಡ)

ಹೋಗುವುದು ಅಸಂಬದ್ಧ, ಅನಾವಶ್ಯಕ. ಶ್ರೀಮಾನ್ ಪುಟ್ಟಸ್ವಾಮಿಯವರು ಈ ಬಗ್ಗೆ ಸವಿಸ್ತಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಈವೊತ್ತು ಈ ತಿದ್ದುಪಡಿಗಳ ಪರಿಣಾಮ ಏನಾಗುತ್ತದೆ. ಹೌಸಿಂಗ್ ಬೋರ್ಡ್ ಪೊಸಿಷನ್ ಏನಾಗುತ್ತದೆ, ಈವೊತ್ತು ಈ ಒಂದು ಸ್ಟ್ಯಾಚುಟರಿ ಬಾಡಿ ಯಾವ ಒಂದು ಪರಿಸ್ಥಿತಿಗೆ ಬರುತ್ತದೆ ನಾವು ಇದನ್ನು ಒಪ್ಪಿಕೊಂಡರೆ ಏನಾಗುತ್ತದೆ ಎನ್ನುವ ಬಗ್ಗೆ ಶ್ರೀಮಾನ್ ಪುಟ್ಟಸ್ವಾಮಿಯವರು ಸವಿಸ್ತಾರವಾಗಿ ಹೇಳಿದ್ದಾರೆ. ಆದುದರಿಂದ ಆ ತಿದ್ದುಪಡಿಗಳ ಬಗ್ಗೆ ನಾನು ಪುನಃ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅವರು ಒಂದು ಮಾತನ್ನು ಹೇಳಿದರು ಯಾವ ಒಂದು ತಾತ್ವಿಕ ಹಿನ್ನಲೆಯಿಂದ ಈ ತಿದ್ದುಪಡಿಗಳನ್ನು ತಂದಿದ್ದಾರೆ ಎಂದು. ಅದಕ್ಕೆ ನನ್ನ ಒಂದು ಉತ್ತರ ಇಷ್ಟು.

ಅವರು ಅದನ್ನು ಹೇಳಲಿಕ್ಕೆ ಸ್ವಲ್ಪ ಕಷ್ಟವಾಯಿತು. ಒಬ್ಬ ವ್ಯಕ್ತಿಯ ಗುರಿಯನ್ನು ಮುಂದಿಟ್ಟುಕೊಂಡು ತಿದ್ದುಪಡಿಗಳನ್ನು ತಂದಿದ್ದಾರೆ. ಒಬ್ಬ ವ್ಯಕ್ತಿಗೋಸ್ಕರ ಈ ತಿದ್ದುಪಡಿ, ಆರ್ಡಿನೆನ್ಸ್ ಮುಖಾಂತರ ಬರಬೇಕಾಗಿ ಬಂತು. ಶ್ರೀಮಾನ್ ರಂಗನಾಥ ಅವರು ಈ ಸಭೆಯಲ್ಲಿ ಸಾಕಷ್ಟು ಅನುಭವವನ್ನು ಗಳಿಸಿಕೊಂಡಿದ್ದಾರೆ. ಮತ್ತು ಇದರ ಬಗ್ಗೆ ಅವರಿಗೆ ಸಾಕಷ್ಟು ಕಳಕಳಿ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ರಾಜ್ಯದಲ್ಲಿರತಕ್ಕ ಮತ್ತೆ ಯಾವುದೇ ಸ್ಟ್ಯಾಚುಟರಿ ಬೋರ್ಡುಗಳು ಏನು ಕೆಲಸ ಮಾಡುತ್ತಿವೆ ಅವುಗಳ ಕೆಲಸದಲ್ಲಿ ರಾಜ್ಯದ ಉಚ್ಚ ನ್ಯಾಯಾಲಯ ಎಷ್ಟರಮಟ್ಟಿಗೆ ಇಂಟರ್‌ಫಿಯರ್ ಆಗಿದೆ ಎನ್ನುವುದನ್ನು ಅವರು ಹೇಳಿದ್ದಾರೆ. ರಾಜ್ಯದಲ್ಲಿ ಈ ಸ್ಟ್ಯಾಚುಟರಿ ಬಾಡೀಸ್ ಏನು ಕೆಲಸ ಮಾಡುತ್ತಿದ್ದಾವೆ. ಅವುಗಳ ಕೆಲಸ ನಿರ್ವಹಣೆಯಲ್ಲಿ ರಾಜ್ಯದ ಉಚ್ಚ ನ್ಯಾಯಾಲಯ ಎಷ್ಟರಮಟ್ಟಿಗೆ ಪ್ರವೇಶ ಮಾಡಿದೆ ಎನ್ನತಕ್ಕದ್ದು ಹೇಳಬೇಕಾದರೆ, ಇನ್ನೂ ಅಂಥ ಸಂದರ್ಭ ಬಂದಿಲ್ಲ ಅದಕ್ಕೆ ಕಾರಣವನ್ನು ನಾನು ಹೇಳುತ್ತೇನೆ. ಅಲ್ಲಿಯ ಚೇರ್ಮನ್ ಗಳಿಗೂ ಮತ್ತು ಸಂಬಂಧಪಟ್ಟಂಥ ಮಂತ್ರಿಗಳಿಗೂ ಯುದ್ಧ ನಡೆದಂಥ ಸನ್ನಿವೇಶ ಎಲ್ಲಾ ಸ್ಟ್ಯಾಚುಟರಿ ಬಾಡೀಸ್‌ನಲ್ಲಿ ಬಂದಿಲ್ಲ. ಇದು ಇರತಕ್ಕಂಥ ಹಿನ್ನಲೆ ಇವತ್ತು ಅಲ್ಲಿರತಕ್ಕ ಯಾವುದೇ ಒಬ್ಬ ವ್ಯಕ್ತಿಯನ್ನು ಹೊರಗೆ ಹಾಕಬೇಕು ಎನ್ನುವುದು ಅಷ್ಟೆ ಇದರ ಪ್ರಶ್ನೆ. ಇದನ್ನು ಬಿಟ್ಟರೆ ಮತ್ತೆ ಏನೂ ಇಲ್ಲ. ಇದರ ಬಗ್ಗೆ ನಾನು ಪಾರ್ಟಿ ಪಾಲಿಟಿಕ್ಸ್‌ಗೆ ಹೋಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅದು ನಡೆದಿದ್ದರೆ, ದಯವಿಟ್ಟು ಹೇಳಿಬಿಡಿ.

ಶ್ರೀ ಎಚ್. ಡಿ. ದೇವೇಗೌಡ — ಹೇಗೆ ಬೇಕಾದರೂ ನೀವು ಇನ್‌ಫರೆನ್ಸ್ ಅನ್ನು ಡ್ರಾ ಮಾಡಬಹುದು. ಒಬ್ಬ ವ್ಯಕ್ತಿಯನ್ನು ತೆಗೆಯಲಿಕ್ಕೆ ಮಾತ್ರ ಇದನ್ನು ಮಾಡಿದ್ದಾರೆ ಎಂದು ಇಷ್ಟು ಹೇಳುತ್ತೇನೆ. ಶ್ರೀಮಾನ್ ರಂಗನಾಥ್ ಅವರು ಹೇಳಿದರು ಇವತ್ತು ಸರ್ಕಾರ ಜನತೆಗೆ ಕೊಟ್ಟಿರತಕ್ಕಂಥ ಆಶ್ವಾಸನೆಗಳನ್ನು ಈಡೇರಿಸುವುದಕ್ಕೆ ಸರ್ವ ಶಕ್ತಿಯನ್ನು ಇಟ್ಟುಕೊಳ್ಳಬೇಕು ಎಂದು. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ ಇದರ ಬಗ್ಗೆ ನಿಮ್ಮ ಅಭಿಪ್ರಾಯಕ್ಕೆ ತದ್ವಿರುದ್ಧ ಇಲ್ಲ. ನಾಳೆ ಬೇರೆ ಸರ್ಕಾರಗಳು ಬಂದಾಗ, ತಮ್ಮ ಕಾರ್ಯಕ್ರಮಗಳನ್ನು ಈಡೇರಿಸುವುದಕ್ಕೆ ಈ ಕಾನೂನು ಬೇಕು. ಆದರೆ ಈ ಒಂದು ಬೋರ್ಡಿಗೆ ಇರತಕ್ಕ ಎಲ್ಲಾ ಅಧಿಕಾರವನ್ನು ತೆಗೆದು ಒಬ್ಬ ಅಧಿಕಾರಿಯ ಕೈಯಲ್ಲಿ ಕೊಡತಕ್ಕದ್ದು ಈ ತಿದ್ದುಪಡಿಯಲ್ಲಿದೆ ನಾನು ಮೊದಲೇ ತಿಳಿಸಿದ್ದೇನೆ, ನಾನು ಈ ತಿದ್ದುಪಡಿಗಳ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ ಎಂದು. ಆದರೆ ಈ ಒಂದು ಆರ್ಡಿನೆನ್ಸ್ ತರತಕ್ಕ ಹಿನ್ನಲೆ ಏನು? ಇದರ ಬಗ್ಗೆ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿದರೆ, ಬಹುಶಃ ಇದು ಸರ್ಕಾರಕ್ಕೆ ಭೂಷಣ ತರತಕ್ಕಂಥದ್ದು ಅಲ್ಲ ಎಂದು ನಾನು ಹೇಳಬೇಕಾಗುತ್ತದೆ. ಮಾಜಿ ಸಚಿವರಾದ ಶ್ರೀಮಾನ್ ಬಸವಲಿಂಗಪ್ಪನವರು ಈ ಬಿಲ್ಲನ್ನು ವಯೋಲೇಟ್ ಮಾಡಿ ಮಾತನಾಡಿದ್ದಾರೆ. ಅವರು ಮಾತನಾಡಿದ್ದು ಪತ್ರಿಕೆಯಲ್ಲಿ ಬಂದಿದೆ, ಅದನ್ನು ನಾನು ಓದಿದ್ದೇನೆ. ಕಳೆದ ಎರಡು ವರ್ಷಗಳಿಂದ ಹೌಸಿಂಗ್ ಬೋರ್ಡಿನ ಕಾರ್ಯಕ್ರಮಗಳೆಲ್ಲಾ ಸ್ಥಗಿತವಾಗಿ. ಇಂಥ ಪರಿಸ್ಥಿತಿ ಬಂದಿದ್ದರಿಂದ ಇವತ್ತು ಇದನ್ನು ಹೆಚ್ಚು ಚುರುಕುಗೊಳಿಸಿ, ನಾವು ಕೊಟ್ಟಿರತಕ್ಕ ಆಶ್ವಾಸನೆಗಳನ್ನು ಈಡೇರಿಸುವುದಕ್ಕೋಸ್ಕರ ಈ ಒಂದು ತಿದ್ದುಪಡಿಯನ್ನು, ಆರ್ಡಿನೆನ್ಸ್ ಮೂಲಕ ತರಲಿಕ್ಕೆ ಪ್ರಯತ್ನ ಮಾಡಿದೆವು ಎಂದು ಹೇಳಿದ್ದಾರೆ. ಶ್ರೀಮಾನ್ ಪುಟ್ಟಸ್ವಾಮಿಯವರು ಹೇಳಿದ ಹಾಗೆ, ಈ ಬೋರ್ಡಿನಲ್ಲಿ ಸುಮಾರು ೫೦ ಪರ್ಸೆಂಟ್ ಸರ್ಕಾರಿ ಅಧಿಕಾರಿಗಳು ಇವತ್ತು ಸದಸ್ಯರಾಗಿ ಕೆಲಸಮಾಡತಕ್ಕದ್ದು ನಮ್ಮ ಹಳೆಯ ಆಕ್ಟ್ ಪ್ರಕಾರ ಇದೆ. ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಬಹುಶಃ ಮೂರು ತಿಂಗಳಿಂದ ಇದು ಪ್ರಾರಂಭವಾಯಿತು. ಇಷ್ಟು ಜನ ಸರ್ಕಾರಿ ಪ್ರತಿನಿಧಿಗಳು ಇದ್ದರೂ ಅದರಲ್ಲಿ ಎಷ್ಟು ಜನ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿದ್ದಾರೆ? ಇದನ್ನು ತಾವು ತಿಳಿಸಬೇಕು. ಅವರು ಏಕೆ ರಾಜೀನಾಮೆ ಕೊಟ್ಟರು? ಅವರಿಗೆ ಅಲ್ಲಿ ಕೆಲಸ ಮಾಡಲು ಶಕ್ತಿ ಇರಲಿಲ್ಲವೇ? ರಾಜ್ಯ ಸರ್ಕಾರದ ಪ್ರತಿನಿಧಿಗಳು ಬೋರ್ಡಿನಲ್ಲಿ ಏನು ಕೆಲಸ ಮಾಡುತ್ತಿದ್ದಾರೆ, ಅವರನ್ನು ರಾಜೀನಾಮೆ ಕೊಡಿ ಎಂದು ರಾಜ್ಯ ಸರ್ಕಾರದವರು ನಿರ್ದೇಶನ ಕೊಟ್ಟು ರಾಜೀನಾಮೆ ಕೊಡಿಸಿದ್ದಾರೆ. ನಾನು ಕೇಳುತ್ತೇನೆ, Chief

Engineer Communication and Buildings, Director of Town Planning and Director of Industries and Commerce. ಇವರಿಗೆ ರಾಜೀನಾಮೆ ಕೊಡಬೇಕು ಎಂದು ಸರ್ಕಾರ ನಿರ್ದೇಶನ ಕೊಡಲಿಕ್ಕೆ ಕಾರಣ ಏನು? ಬೋರ್ಡ್ ತನ್ನ ಕೆಲಸಗಳನ್ನು ಯಾವುದೇ ಇಂಟರ್‌ಫಿಯರೆನ್ಸ್ ಇಲ್ಲದೆ ಮಾಡುವುದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಟ್ಟಿದ್ದಾರೆಯೇ ಎಂದು ಒಂದು ಪ್ರಶ್ನೆಯನ್ನು ನಾನು ಕೇಳಬೇಕಾಗುತ್ತದೆ. ಒಂದು ವೇಳೆ, ತಾವು ಇದರಲ್ಲಿ ಇಂಟರ್‌ಫಿಯರ್ ಆಗದೆ, ಅವರ ಕೆಲಸ ಕಾರ್ಯಗಳನ್ನು ನಿರ್ವಹಣೆ ಮಾಡುವಲ್ಲಿ ತಪ್ಪಿತಸ್ಥರಾಗಿದ್ದರೆ, ಸೆಕ್ಷನ್ ೮೬ ರ ಪ್ರಕಾರ ಅವರ ಮೇಲೆ ಗಧಾಪ್ರಹಾರ ಮಾಡಿ, ನನ್ನ ಅಡ್ಡಿ ಇಲ್ಲ. ಮತ್ತೊಂದು ವಿಷಯ, ಈ ಮೂರು ಜನ ಪ್ರತಿನಿಧಿಗಳು ರಾಜೀನಾಮೆ ಕೊಟ್ಟಮೇಲೆ ಉಳಿದಂಥ ಇಬ್ಬರು ಗವರ್ನಮೆಂಟ್ ರೆಪ್ರಸೆಂಟೇಟೀವ್ಸ್, ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಚೇರ್ಮನ್, ಮತ್ತು ಲೇಬರ್ ಕಮೀಷನರ್, ಇವರನ್ನು ಸರ್ಕಾರದವರು ತಮಗೆ ಯಾವ ಸಬ್ಜೆಕ್ಟ್ ಬೋರ್ಡಿನಲ್ಲಿ ಪಾಸ್ ಆಗಬೇಕೋ ಅಂಥಾದ್ದಕ್ಕೆ ಮಾತ್ರ ಇವರು ಅಲ್ಲಿ ಕೂರಬೇಕು, ಆ ಸಬ್ಜೆಕ್ಟ್ಸ್ ಪಾಸ್ ಆದ ಮೇಲೆ ಅವರು ವಾಪಸ್ ಬರಬೇಕು ಎಂದು ಹೇಳಿದ್ದಾರೆ. ಯಾವ ಸಬ್ಜೆಕ್ಟ್ಸ್ ಸರ್ಕಾರದ ಇಚ್ಛೆಯಲ್ಲಿ ಪಾಸ್ ಆಗಬೇಕಾಗಿದೆಯೋ ಆ ಸಬ್ಜೆಕ್ಟ್ಸ್‌ಗೆ ಮಾತ್ರ ಈ ಇಬ್ಬರೂ ಕೂರಬೇಕು, ಸಬ್ಜೆಕ್ಟ್ಸ್ ಪಾಸ್ ಆದ ತಕ್ಷಣ ಹೊರಗಡೆ ಬರಬೇಕು. ಇದನ್ನು ನಾನು ಅವರು ತೆಗೆದುಕೊಂಡಿರತಕ್ಕ ನಿರ್ಣಯಗಳ ಆಧಾರದ ಮೇಲೆ ಹೇಳುತ್ತಿದ್ದೇನೆ. ಇಲ್ಲಿ ಕಟ್ಟುಕತೆಯನ್ನು ಹೇಳಬೇಕಾದದ್ದು ಇಲ್ಲ. ಪರಿಸ್ಥಿತಿ ಹೀಗೆ ಇರತಕ್ಕಂಥ ಕಾಲದಲ್ಲಿ ಬೋರ್ಡ್ ತನ್ನ ಕಾರ್ಯವನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಿಲ್ಲ, ತತ್ಪರಿಣಾಮವಾಗಿ ಜನಕೆಗೆ ಆಶ್ವಾಸನೆ ಕೊಟ್ಟಿದ್ದನ್ನು ಕಾರ್ಯಗತ ಮಾಡಲಿಕ್ಕೆ ಅಡ್ಡಿ ತಂದಿದ್ದಾರೆ ಎನ್ನತಕ್ಕಂಥ ಒಂದು ಅಪಾದನೆಯನ್ನು ಹೊಂಸತಕ್ಕದ್ದರಲ್ಲಿ ಎಷ್ಟು ಪ್ರಾಮಾಣಿಕತೆ ಇದೆಯೆಂದು ನಾನು ಕೇಳಬೇಕಾಗುತ್ತದೆ. ಒಬ್ಬ ವ್ಯಕ್ತಿಯ ಗುರಿಯನ್ನು ಇಟ್ಟುಕೊಂಡು ಇಂಥ ಒಂದು ಆರ್ಡಿನೆನ್ಸ್ ತರತಕ್ಕಂಥದಕ್ಕೆ ನಿಮ್ಮಲ್ಲಿರತಕ್ಕ ಅಧಿಕಾರ ದುರುಪಯೋಗ ಮಾಡಿಕೊಳ್ಳುವುದಾದರೆ, ಬಹುಶಃ ಈ ಸಭೆ ಅದನ್ನು ತೀವ್ರವಾಗಿ ಖಂಡಿಸಬೇಕಾಗುತ್ತದೆ. ಮಾನ್ಯ ಸಭಾಧ್ಯಕ್ಷಣೀಯವರೇ, ಇವತ್ತು ಶ್ರೀಮಾನ್ ರಂಗನಾಥ್ ಅವರು ಹೇಳಿದರು, ಈ ಒಂದು ಪ್ರಕರಣದಲ್ಲಿ ಜುಡಿಷಿಯಲ್ ಇಂಟರ್‌ಫಿಯರೆನ್ಸ್ ಹೆಚ್ಚಾಗಿದೆ ಎಂದು.

ಶ್ರೀ ಕೆ. ಎಚ್. ರಂಗನಾಥ್.—ನಾನು ಹಾಗೆ ಹೇಳಲಿಲ್ಲ. ಸರ್ಕಾರ ತನ್ನ ಕೆಲಸಗಳನ್ನು ಮಾಡುವಾಗ ಅದಕ್ಕೆ ಅಧಿಕಾರ ಕೆಲವು ಕಾನೂನಿನ ಕೆಳಗಡೆ ಇರುತ್ತದೆ. ಕೆಲಸ ಮಾಡಿಸುವ ದೃಷ್ಟಿಯಿಂದ ನಾವು ಏನಾದರೂ ಕಾರ್ಯಕ್ರಮ ತೆಗೆದುಕೊಂಡಾಗ, ಅದನ್ನು ಹೈಕೋರ್ಟ್ ಪ್ರಶ್ನೆ ಮಾಡಿದಾಗ, ಜುಡಿಷಿಯಲ್ ಇಂಟರ್‌ಫಿಯರೆನ್ಸ್ ಮಾಡುವ ಪರಿಸ್ಥಿತಿ ಬಂದಿದೆ, ಇದನ್ನು ನಾವು ವಿಚಾರಣೆ ಮಾಡುವ ಪರಿಸ್ಥಿತಿಯಲ್ಲಿದ್ದೇವೆ ಎಂದು ನಾನು ಹೇಳಿದೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ರಂಗನಾಥ ಅವರಿಗೆ ದ್ವಿಮುಖ ಅನುಭವ ಇದೆ. ಅವರು ಕಾನೂನು ಪಂಡಿತರಾಗಿ ಕೆಲಸ ಮಾಡಿದ್ದಾರೆ, ಮತ್ತೊಂದು ಕಡೆ ರಾಜಕಾರಣಿಯಾಗಿ ಕೆಲಸಮಾಡತಕ್ಕ ಸನ್ನಿವೇಶ ಅವರಿಗೆ ಇದೆ. ಬಹುಶಃ ಕೋರ್ಟು, ಕಾರ್ಯಾಂಗದ ಯಾವುದೇ ಕೆಲಸದಲ್ಲಿ ಪ್ರವೇಶ ಮಾಡಬೇಕಾದರೆ, ಶಾಸಕಾಂಗದಲ್ಲಿ ಮಾಡಿರತಕ್ಕ ಅಧಿಕಾರಗಳಲ್ಲಿ, ಕಾರ್ಯಾಂಗ ಏನಾದರೂ ಎಡವಿ ನಡೆದಿದ್ದರೆ ಅಂಥ ಸಂದರ್ಭದಲ್ಲಿ ಪ್ರವೇಶ ಮಾಡಬಹುದೇ ಪರಂತು ಹಾಗಲ್ಲದೆ ಮಾಡುವ ಹಾಗಿಲ್ಲ. ನಾನು ಕೋರ್ಟ್‌ಗೆ ಹೋಗದೆ ಇದ್ದರೂ ಅನುಭವದಲ್ಲಿ ಇದನ್ನು ಹೇಳುತ್ತಿದ್ದೇನೆ. ನಾವು ಮಾಡಿಕೊಡಿರತಕ್ಕ ಕಾನೂನುಗಳನ್ನು ಕಾರ್ಯರೂಪಕ್ಕೆ ತರತಕ್ಕ ಕಾಲದಲ್ಲಿ ತಪ್ಪುಗಳು ಏನಾದರೂ ಕಂಡರೆ ಅದಕ್ಕೆ ರಕ್ಷಣೆ ಪಡೆಯಲಿಕ್ಕೆ, ರಾಷ್ಟ್ರದ, ರಾಜ್ಯದ ಯಾವುದೇ ಪೌರನಿಗೆ ಅಧಿಕಾರ ಇದೆ, ಅವನು ಕೋರ್ಟಿಗೆ ಹೋಗುತ್ತಾನೆ, ಮತ್ತು ಪರಿಹಾರ ಪಡೆಯಲಿಕ್ಕೆ ಪ್ರಯತ್ನ ಮಾಡುತ್ತಾನೆ. ಅಂಥ ಸಂದರ್ಭದಲ್ಲಿ ಕೋರ್ಟ್ ಪ್ರವೇಶ ಮಾಡಿರಬಹುದು. ಇವತ್ತು ನೀವು ಸೆಕ್ಷನ್ ೮೬ ಏನು ಇದೆ, ಅದರ ಪ್ರಕಾರ ಕ್ರಮ ತೆಗೆದುಕೊಳ್ಳಲಿಕ್ಕೆ ಇಲ್ಲಿ ಪ್ರಯತ್ನ ಮಾಡಿದ್ದೀರಿ. ಮತ್ತು ಸೆಕ್ಷನ್ ೮೬ ಕೆಳಗಡೆ ಒಂದು ನೋಟೀಸ್ ಅನ್ನು ಅವರಿಗೆ ಕೊಟ್ಟಿದ್ದೀರಿ.

ಓರಲ್ ಇನಸ್ಟ್ರಕ್ಷನ್ ಏನು ಕೊಟ್ಟಿದ್ದೀರಿ ? ಅವರು ಏನು ಕಂಪ್ಲೈ ಮಾಡಲಿಲ್ಲ ? ಯಾರಾದರೂ ಅಧಿಕಾರಿಯನ್ನು ವರ್ಗ ಮಾಡಿ ಎಂದು ಹೇಳಿದಿರೀ ? ಯಾವುದರಲ್ಲಿ ಭಿನ್ನಾಭಿಪ್ರಾಯ ಬಂತು ? ನಿಮ್ಮ ಓರಲ್ ಇನ್‌ಸ್ಟ್ರಕ್ಷನ್ ಏನು ಎಂಬುದನ್ನು ದಯಮಾಡಿ ತಿಳಿಸಬೇಕು. ಒಂದು ವೇಳೆ ಬೋರ್ಡಿನ ಛೇರ್ಮನ್‌ರಾಗಲೀ, ಸದಸ್ಯರುಗಳಾಗಲೀ ಅಥವಾ ಬೋರ್ಡಿನ ಯಾವ ಅಧಿಕಾರಿಯೇ ಆಗಿರಲಿ, ಅವರು ಸರಕಾರ ಕೊಟ್ಟಿರುವ ನಿರ್ದೇಶನಗಳನ್ನು ಯಾವುದೇ ಸಂದರ್ಭದಲ್ಲಿ ಉಲ್ಲಂಘನೆ ಮಾಡಿದ್ದರೆ, ಅಂತಹ ಸಂದರ್ಭಗಳನ್ನೂ ತಿಳಿಸಬೇಕು. ಏಕೆಂದರೆ, ಒಂದು ಸಾರಿ ಮಂತ್ರಿಗಳ ಫೋನಿನ ಮುಖಾಂತರ ಇನ್‌ಸ್ಟ್ರಕ್ಷನ್

(ಶ್ರೀ ಹೆಚ್. ಡಿ. ದೇವೇಗೌಡ

ಕೊಟ್ಟರೆ ಅದನ್ನು ಬರವಣಿಗೆಯಲ್ಲಿ ಕನ್‌ಫರ್ಮ್ ಮಾಡುವುದು ಆಡಳಿತದಲ್ಲಿರತಕ್ಕ ಒಂದು ಸಂಪ್ರದಾಯ. ಆ ಒಂದು ಪದ್ಧತಿ ಇವತ್ತು ಇಲ್ಲದೇ ಇರತಕ್ಕದ್ದು ತಮ್ಮ ಗಮನಕ್ಕೆ ತರಬೇಕಾದ ಅವಶ್ಯಕತೆ ಇಲ್ಲ. ಆದುದರಿಂದ ಯಾವ ಓರಲ್ ಇನ್‌ಸ್ಟ್ರಕ್ಷನ್ ಕಾರ್ಯರೂಪಕ್ಕೆ ತರಲಿಲ್ಲ ಎಂದು ತಿಳಿಸಬೇಕು.

ಮತ್ತೊಂದು ತಮ್ಮ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಇಂತಹ ಒಂದು ತಪ್ಪು ನೋಟೀಸನ್ನು ಕೊಟ್ಟಿದ್ದರ ಪರಿಣಾಮವಾಗಿ ಕೋರ್ಟಿಗೆ ಹೋಗಿರಬಹುದು. ಅದರ ಬಗ್ಗೆ ನಾನು ವಕೀಲಿ ತೆಗೆದು ಕೊಳ್ಳುವ ಆವಶ್ಯಕತೆ ಇಲ್ಲ. ಕೋರ್ಟಿನಲ್ಲಿ ಸಾಕಷ್ಟು ವ್ಯವಹಾರ ನಡೆದುಹೋಗಿದೆ. ಈಗ ಎಲ್ಲಾಕೇಸು ವಿತ್ ಡ್ರಾ ಆಗಿದೆ. ಎಂದು ಹೇಳುತ್ತಾರೆ ಇಷ್ಟು ಮಾತ್ರ ಹೇಳುತ್ತೇನೆ, ಬೋರ್ಡಿನ ವ್ಯವಹಾರಗಳನ್ನು ಎಷ್ಟುಮಟ್ಟಿಗೆ ತೆಗೆದುಕೊಂಡು ಹೋದಿರಿ ಎಂದರೆ, ಕಳೆದ ಎರಡು ವರ್ಷಗಳಿಂದ ಅದನ್ನು ಕೆಲಸ ಮಾಡಲಿಕ್ಕೆ ಬಿಡಲಿಲ್ಲ. ಮತ್ತೊಂದು ವಿಷಯ, ಶ್ರೀಮಾನ ಬಸವಲಿಂಗಪ್ಪನವರು ಹೇಳಿದ್ದಾರೆ, ಅದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ ಜಮೀನು ಅಕ್ವೈರ್ ಮಾಡಿರುವುದರಲ್ಲಿ ದೊಡ್ಡ ತಪ್ಪುಗಳನ್ನು ಮಾಡಿದ್ದಾರೆ ಎಂದು. ನಾನು ಇಷ್ಟು ಮಾತ್ರ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ಬೋರ್ಡಿನಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ತನಿಖೆ ಮಾಡಬೇಕು ಅದಕ್ಕೆ ನನ್ನದು ಏನೂ ತಕರಾರು ಇಲ್ಲ. ಸಾರ್ವಜನಿಕರ ಹಣ ಪೋಲಾಗಿದ್ದರೆ, ಅವರು ಯಾವ ಪಕ್ಷಕ್ಕೇ ಸೇರಿರಲಿ, ಅವರು ಯಾರೇ ಛೇರ್ಮನ್ ಆಗಿರಲಿ, ಅದರ ಬಗ್ಗೆ ತಾವು ದಯಮಾಡಿ ವಿಚಾರಣೆ ಮಾಡಬೇಕು. ಅಂತಿಂಥ ತಪ್ಪುಗಳನ್ನು ಮಾಡಿದ್ದಾರೆ, ಅದರ ಬಗ್ಗೆ ವಿಚಾರಣೆಗೆ ಆರ್ಡರ್ ಮಾಡಿದ್ದೇವೆ ಎಂದು ಹೇಳಿ, ಅದಕ್ಕೆ ನನ್ನದೇನೂ ಅಡ್ಡಿ ಇಲ್ಲ. ತಮಗೆ ಇಷ್ಟು ಮಾತ್ರ ಹೇಳಲು ಇಚ್ಛೆಪಡುತ್ತೇನೆ. ಚೇರ್ಮನ್ ಒಬ್ಬರೇ ಅಲ್ಲಿ ಇವತ್ತು ಯಾವುದೇ ಒಂದು ನಿರ್ಣಯ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಯಾವುದೇ ಜಮೀನು ತೆಗೆದುಕೊಳ್ಳತಕ್ಕದಾಗಲೀ, ಮನೆಗಳನ್ನು ಕಟ್ಟಿಸಲಿಕ್ಕೆ ಆಗಲೀ ಇಡೀ ಬೋರ್ಡಿನ ತೀರ್ಮಾನವಾಗಬೇಕು. ಬೋರ್ಡಿನಲ್ಲಿ ನಿಮ್ಮ ಸರಕಾರದ ಪ್ರತಿ ನಿಧಿಗಳು ಇದ್ದಾರೆ.

ಶ್ರೀ ಕೆ. ಎಚ್. ರಂಗನಾಥ .—ವಿಚಾರ ಸರಿಯೋ ತಪ್ಪೋ ಅದಕ್ಕೆ ಹೋಗುವುದು ಬೇಡ. ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ ಯಾರೇ ಛೇರ್ಮನ್‌ರಾಗಿರಲಿ, ಯಾವುದೇ ಬೋರ್ಡಾಗಿರಲಿ, ಅದು ಸರಕಾರದ ಕಾನೂನಿನ ಅನುಗುಣವಾಗಿ ಕೆಲಸ ಮಾಡಬೇಕು. ಸ್ವತಃ ತನ್ನ ಮನಸ್ಸಿಗೆ ಬಂದ ರೀತಿಯಲ್ಲಿ ವರ್ತಿಸಲಿಕ್ಕೆ ಸಾಧ್ಯವಿಲ್ಲ, ಸೆಕ್ಷನ್ ೩೩ರಲ್ಲಿ ಹೀಗೆ ಹೇಳಿದೆ.

'Provided that the previous approval of the State Government shall be obtained in case of purchase or exchange involving land worth more than Rs. 25,000- '

ಇದನ್ನು ಅನಾವಶ್ಯಕವಾಗಿ ಪ್ರಸ್ತಾಪ ಮಾಡಬಾರದು ಎಂದು ಇದ್ದೆ. ಪ್ರಸ್ತಾಪ ಮಾಡಿರುವುದರಿಂದ ಒಂದು ಮಾತನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. It was brought to the notice of the Government by the Housing Commissoner that the Board has purchased land measuring about 35 acres and 28 guntas valued at Rs. 17,31, 800 from a firm known as Bangalore Builders It was also brought to notice that though the Board has authorised the Chairman to purchase 27 acres and 35 guntas, the Chairman purchased 35 acres and 28 guntas. To purchase over and above that he has no power. That is number 1. Number 2 is should he not have followed Section 33(1) provision ? It is not a small amount. It is a very big amount invovng about 17 lakhs of rupees. As a matter of fact if the Hon. Member is pleased to know, this is a land which is very close to Bangalore.

ಅದು ಹೊಸಹಳ್ಳಿಗೆ ಹತ್ತಿರದಲ್ಲಿ ಇದೆ. ಅಲ್ಲಿ ೨೭ ಎಕರೆ ಜಮೀನಿಗೆ ೧೭ ಲಕ್ಷ ರೂಪಾಯಿಗಳನ್ನು ಕೊಡುವುದಾದರೆ, ನಾವು ಇನ್ನು ಮನೆಗಳನ್ನು ಯಾರಿಗೂ ಕಟ್ಟಿಸಿಕೊಡಬೇಕಾಗಿಲ್ಲ. ಪ್ರೋಗ್ರಾಂ ಕೈಬಿಟ್ಟು ಅವರು ಏನಾದರೂ ಮಾಡಿಕೊಳ್ಳಲಿ ಎನ್ನುವ ಪರಿಸ್ಥಿತಿಗೆ ಬರುತ್ತದೆ. ಬೋರ್ಡಿಗೆ ಕೊಟ್ಟಿರತಕ್ಕ ಹಣ, ರೈತರು ಕೊಟ್ಟ ಕಂದಾಯದ ದುಡ್ಡು. ಯಾರೋ ಒಬ್ಬ ವ್ಯಕ್ತಿ ಅದನ್ನು ದುರುಪಯೋಗ ಮಾಡುವು ದಾದರೆ, We have to take very serious notice of it. ತಾವು, ಇದರ ಬಗ್ಗೆ ಒಂದು ಎನಕ್ವಾಯರಿ ಮಾಡಿ ಎಂದು ಏನು ಹೇಳಿದಿರಿ ಅದು ಸೂಕ್ತವಾದ ಸಲಹೆ. ಅದನ್ನು ಮಾಡೋಣ. ನಾನು

ಹೇಳುವುದಾದರೆ, ಇಂತಹ ಬೋರ್ಡಿನ ನಡವಳಿಕೆಗಳು ಪ್ರತಿ ವರ್ಷ ಈ ಸಭೆಯುಲ್ಲಿ ಚರ್ಚೆಗೆ ಬರಬೇಕು. Scrupulously it should be discussed in this House Otherewise, there is no scope for you. ಅವರು ಏನು ಬೇಕೆಂದರೂ ರೆಸಲ್ಯೂಷನ್ ಪಾಸ್ ಮಾಡಿಕೊಂಡು, ಎಷ್ಟು ಹಣ ಬೇಕಾದರೂ ಖರ್ಚು ಮಾಡುವುದಕ್ಕೆ ಅಧಿಕಾರ ವನ್ನು ಈ ಸಭೆ ಬೋರ್ಡಿಗೆ ಕೊಟ್ಟಿದೆ ಎಂದರೆ, ಅದನ್ನು ಈ ದಿನ ಹೊಸದಾಗಿ ವಿಚಾರ ಮಾಡಬೇಕಾಗಿದೆ. ಶ್ರೀ ಪುಟ್ಟಸ್ವಾಮಿಯುವರ ಹೇಳಿದಂತೆ, ೪ ವರ್ಷ ಅಂತಹ ಪರಿಸ್ಥಿತಿ ಬರಲಿಲ್ಲ. ಎಂದರೆ ಆಗ ಇದಕ್ಕೆ ಅವಕಾಶ ಕೊಟ್ಟರಲಿಲ್ಲವೆಂದು ಕಾಣುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ತಾವು ಬಹಳ ಸಮಂಜಸವಾದ ಅಂಶವನ್ನು ಎತ್ತಿದ್ದೀರಿ. ೨೭ ಎಕರೆಗೆ ೧೭ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂದು ಹೇಳಿದಿರಿ.

SRI K. PUTTASWAMY.—When the Chairman exceeds his powers, he is personally liable.

SRI K. H. RANGANATH —That is the difficult position I am going into that aspect and also, as the Hon Member Mr. Puttaswamy puts it. I am curious to know whether he is personally liable. ಅದನ್ನೇ ಯೋಚನೆ ಮಾಡುತ್ತಾ ಇದ್ದೇನೆ. ಒಂದು ದಾವಾ ಹಾಕಬೇಕಾಗುತ್ತದೆ. ದಾವಾ ಹಾಕಿ ಡಿಕ್ರಿ ಮಾಡಿಸಿಕೊಂಡು, ಆಮೇಲೆ ಏನು ಮಾಡಬೇಕೆಂದು ಕಷ್ಟದ ಪರಿಸ್ಥಿತಿಯೊಳಗೆ ಇದ್ದೇವೆ. ಈ ಸಭೆ ಅದನ್ನು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ — ಶ್ರೀಮಾನ್ ರಂಗನಾಥರವರಿಗೆ ಸಾರ್ವಜನಿಕರ ಹಣವನ್ನು ವ್ಯವಸ್ಥಿತ ರೀತಿಯಲ್ಲಿ, ಯೋಗ್ಯ ರೀತಿಯಲ್ಲಿ, ಉಪಯುಕ್ತವಾದ ಕೆಲಸಗಳಿಗೆ ಖರ್ಚು ಮಾಡಬೇಕೆನ್ನುವ ಆಸ್ಥೆ ಆಸಕ್ತಿ ಎಷ್ಟು ಇದೆಯೋ, ಅಷ್ಟೇ ಆಸಕ್ತಿ ಮತ್ತು ಆಸ್ಥೆ ನನಗೂ ಇದೆ. ಯಾವ ಕಾರಣಕ್ಕೂ ನಾನು ಅದರಲ್ಲಿ ಹಿಂದೆ ಬೀಳುವುದಿಲ್ಲ. ಅದಕ್ಕಾಗಿಯೇ ನಾನು ಮೊದಲೇ ಹೇಳಿದ್ದೇನೆ. ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡದೆ, ಯಾರಾದರೂ ತಪ್ಪು ಮಾಡಿದ್ದರೆ ಅವರಿಗೆ ಶಿಕ್ಷೆ ಮಾಡಲಿಕ್ಕೆ ಪ್ರಯತ್ನ ಮಾಡಬೇಕು ಎಂದು. ಇವತ್ತು ತಾವು ಹೇಳಿದಿರಿ, ಕಾನೂನು ಪ್ರಕಾರ ತಾವು ದಾವಾ ಹಾಕಬಹುದು ಎಂದು. ಅದರ ಬಗ್ಗೆ ಇಷ್ಟು ಹೇಳಲಿಕ್ಕೆ ಇಷ್ಟಪಡುತ್ತೇನೆ ಇವತ್ತು ೨೫ ಸಾವಿರ ರೂಪಾಯಿಗಳಿಗಿಂತ ಮೇಲ್ಪಟ್ಟು ವ್ಯವಹಾರ ಯಾವುದೇ ಇದ್ದರೂ ಕೂಡ, ಅದು ಸರಕಾರಕ್ಕೆ ಬಂದು ಪೂರ್ವಭಾವಿಯಾಗಿ ಸರಕಾರದ ಅನುಮತಿ ಪಡೆದು, ಅದರ ಬಟವಾಡೆ ಮಾಡಬೇಕು ಇದೆ. ಯಾರಾದರೂ ಆ ಕಾನೂನಿನಲ್ಲಿ ಎಡವಿದ್ದರೆ ಅದಕ್ಕೆ ತಕ್ಕ ಪ್ರಾಯಶ್ಚಿತ್ತ ಅನುಭವಿಸಬೇಕಾಗುತ್ತದೆ. ಇವತ್ತು ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡುವಾಗ ಹಣವನ್ನು ಏನು ಬಟವಾಡೆ ಮಾಡಿದ್ದಾರೆ, ಅದಕ್ಕೆ ಬಹುಶಃ ಛೇರ್ಮನ್ ಮತ್ತು ಸದಸ್ಯರುಗಳ ನಿರ್ಣಯ ಮಾಡತಕ್ಕದ್ದು ಒಂದೇ ಅಲ್ಲ, ಅದಕ್ಕೆ ಸಂಬಂಧಪಟ್ಟಂತ ರೆವಿನ್ಯೂ ಅಧಿಕಾರಿಗಳೂ ಇರಬಹುದು.

ಶ್ರೀ ಕೆ. ಎಚ್. ರಂಗನಾಥ —ತಾವು, ಬೆಂಗಳೂರಿನಲ್ಲೇ ಇದ್ದೀರಿ. ಹೊಸಹಳ್ಳಿ ಹತ್ತಿರದಲ್ಲಿ ೩೫ ಎಕರೆಗೆ ೧೭ ಲಕ್ಷ ರೂಪಾಯಿ ಕೊಡುವುದಾದರೆ, ಒಂದು ಎಕರೆಗೆ ಎಷ್ಟು ಬಿತ್ತು ಎಂಬುದನ್ನು ತಾವೇ ವಿಚಾರಮಾಡಿ. ಇದು ಅಗ್ರಿಕಲ್ಚರಲ್ ಲ್ಯಾಂಡ್. ನಾನ್ ಅಗ್ರಿಕಲ್ಚರಲ್ ಅಲ್ಲಾ. ಅಲಿನೇಟೆಡ್ ಭೂಮಿ ಅಲ್ಲ. ಒಬ್ಬ ಅಧಿಕಾರಿ ನೆಗೋಷಿಯೇಟ್ ಮಾಡಬಹುದು. ಏನೋ ಬರೆಯಬಹುದು. ಇಷ್ಟು ಹಣ ಕೊಡಿ ಎಂದು ಹೇಳಬಹುದು ಆದರೆ, ೩೫ ಎಕರೆಗೆ ೧೭ ಲಕ್ಷ ರೂಪಾಯಿಗಳನ್ನು ಕೊಡುವುದಾದರೆ, ಈ ರಾಜ್ಯದಲ್ಲಿ ನಾವು ಎಷ್ಟು ಜನರಿಗೆ ಮನೆಗಳನ್ನು ಕಟ್ಟಿಸಿಕೊಡಲಿಕ್ಕೆ ಸಾಧ್ಯ ಆ ರೀತಿ ಮಾಡಿದರೆ, ಸರಕಾರ ಉಳಿಯಲಿಕ್ಕೆ ಸಾಧ್ಯವಿಲ್ಲ.

11.00 A. M.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಬಹಳ ಗಹನವಾದ ಪ್ರಶ್ನೆ ಎತ್ತಿದರು ೩೫ ಎಕರೆ ಅಥವಾ ೩೭ ಎಕರೆಗೆ ೧೭ ಲಕ್ಷ ರೂಪಾಯಿ ಕೊಟ್ಟಿದ್ದಾರೆ ಎಂದು ಅಧಿಕಾರಿಗಳನ್ನು ಹಿಡಿಯಲಿಕ್ಕೆ ಕಷ್ಟವಿಲ್ಲ. ಯಾರೋ ಮೆಂಬರೋ, ಛೇರ್ಮನ್ನೋ ಹೊರಟು ಹೋದರೆ, ಈ ಬೋರ್ಡ್‌ನಲ್ಲಿ ಕೆಲಸಮಾಡ ತಕ್ಕಂಥ ೫೦ ಪರ್ಸೆಂಟ್ ಅಧಿಕಾರಿಗಳು ಇದ್ದಾರೆ ಅವರನ್ನು ಹಿಡಿಯಲಿಕ್ಕೆ ನಮಗೆ ಕಷ್ಟವಿಲ್ಲ. The Board consist of 50 per cent official members who are also responsible for any decision taken by the Board.

SRI K. H RANGANATH.—We have to fix the responsibility with the whole Board itself. ಮುನಿಸಿಪಾಲಿಟಿಯಲ್ಲಿ ತಪ್ಪು ಮಾಡಿದ್ದರೆ ಅವರಿಗೆ ಸರ್‌ಛಾರ್ಜ್ ಮಾಡುತ್ತೇವೆ. That provision is there.

SRI K PUTTASWAMY —Can we not bring an Amendment to this Act with retrospective effect and make all these persons personally liable ?

ಶ್ರೀ ಎಸ್. ಬಂಗಾರಪ್ಪ.—ನನ್ನ ಸಲಹೆ ಏನೆಂದರೆ, ಈಗ ನಡೆದಿರತಕ್ಕ ೩೭ ಚಿಲ್ಲರೆ ಎಕರೆಗೆ ೧೨ ಅಥವಾ ೮ ಲಕ್ಷ ರೂಪಾಯಿ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಶ್ರೀಮಾನ್ ದೇವೇಗೌಡರು ಹೇಳಿದ ಹಾಗೆ, ಬೋರ್ಡಿನಲ್ಲಿ ಅರ್ಧಕ್ಕಿಂತ ಹೆಚ್ಚಾಗಿ ಅಫಿಷಿಯಲ್ ಮೆಂಬರ್ಸ್ ಇದ್ದಾರೆ ಶ್ರೀಮಾನ್ ಪುಟ್ಟಸ್ವಾಮಿಯವರು ಹೇಳಿದಹಾಗೆ ತಿದ್ದುಪಡಿ ತಂದು ಮುಂದೆ ಸರ್ಕಾರ ಪರಿಶೀಲನೆ ಮಾಡುತ್ತೇವೆ ಎಂದು ಉತ್ತರ ಕೊಡುವುದಾದರೆ ಆ ರೀತಿ ತಿದ್ದುಪಡಿ ತಂದು, ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಯಾವರೀತಿ ಕೊಡಬೇಕು ಎಂದು ಯೋಚನೆಮಾಡಿ ಕೊಡಿ ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕೋ ಅದಕ್ಕೆ ಅವಕಾಶ ಮಾಡಿಕೊಳ್ಳಿ. ಅದು ಈ ದಿವಸದ ಉತ್ತರದಲ್ಲಿ ಬರೋಣವಾಗಲಿ.

ಶ್ರೀ ಎಚ್. ಡಿ ದೇವೇಗೌಡ.—ನಾನು ವಿರೋಧ ಮಾಡಿಲ್ಲ ಶಿಕ್ಷೆ ಮಾಡುವುದಕ್ಕೆ ನಮ್ಮ ಕಡೆಯಿಂದ ಏನು ಸಹಾಯ ಅಪೇಕ್ಷೆ ಮಾಡುತ್ತೀರಿ, ತಿದ್ದುಪಡಿ ಮಾಡೋದೆ ಎಂದು ಅದಕ್ಕೆ ಹೇಳುತ್ತೀರೋ, ಸಮಗ್ರ ಮಸೂದೆಯೆಂದು ಹೇಳುತ್ತೀರೋ ಏನೇನು ಬೇಕೋ ಯೋಚನೆ ಮಾಡಿರಿ ಯಾವುದಕ್ಕೂ ಅಡ್ಡಿ ಬರುವುದಿಲ್ಲ. ನನ್ನ ಮುಂದೆ ಇರತಕ್ಕ ಪ್ರಶ್ನೆ, ಸರ್ಕಾರ ಅದರಲ್ಲೂ ಹಿರಿಯ ಅಧಿಕಾರಿ ಐ.ಎ.ಎಸ್. ಪರ್ಸೆಂಟ್ ರೆಪ್ರಸೆಂಟ್ ಬೋರ್ಡಿನಲ್ಲಿರತಕ್ಕ ಸಂದರ್ಭದಲ್ಲಿ, ಇವತ್ತು ಅಕ್ರ ಏನಾದರೂ ಅವ್ಯವಹಾರ ನಡೆಯಲಿಕ್ಕೆ ಖಾಸಗಿ ಸದಸ್ಯರು ಜೊತೆಗೆ ಶಾಮೀಲಾಗಿದ್ದರೆ. ಅದರ ಬಗ್ಗೆ ನಾವು ತೀವ್ರತೆಯಿಂದ ಯೋಚನೆ ಮಾಡಬೇಕಾಗುತ್ತದೆ ಏಕೆಂದರೆ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡಿನ ಅಧ್ಯಕ್ಷರು, ಆಸಭೆಯ ಸದಸ್ಯರಾಗಿರುತ್ತಾರೆ. ಆ ಒಂದು ಬೋರ್ಡಿನಲ್ಲಿ ಸಿಟಿ ಇಂಪ್ರೂವ್‌ಮೆಂಟ್ ಬೋರ್ಡಿನ ಛೇರ್ಮನ್ ಒಬ್ಬರು ಸದಸ್ಯರಾಗಿ ಕೆಲಸಮಾಡಿದ್ದಾರೆ. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡಿನ ಅಧ್ಯಕ್ಷರು ಒಬ್ಬ ಖಾಸಗಿ ವ್ಯಕ್ತಿಯಾಗಿಲ್ಲ. ಅವರು ಒಬ್ಬ ಸರ್ಕಾರಿ ಅಧಿಕಾರಿ. ಮೊನ್ನೆ ಅಧಿಕಾರಕ್ಕೆ ಬಂದಿರಬಹುದು ಮೊದಲು ಸರ್ಕಾರದಲ್ಲಿ ಸೀನಿಯರ್ ಐ.ಎ.ಎಸ್. ಕೆಲಸದಾಗಿ ಕೆಲಸಮಾಡಿದ್ದಾರೆ. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್ ತೆಗೆದುಕೊಂಡಿರತಕ್ಕ ಜಮೀನು, ಅದಕ್ಕೆ ಕೊಟ್ಟಿರತಕ್ಕ ಪರಿಹಾರ ಇದರಲ್ಲಿ ತೆಗೆದುಕೊಂಡಿರತಕ್ಕ ಜಮೀನು ಇದಕ್ಕೆ ಕೊಟ್ಟಿರತಕ್ಕ ಪರಿಹಾರ ಯಾವ ಜಮೀನಿಗೆ ಎಷ್ಟೆಷ್ಟು ಬೆಲೆ ಯಾಗುತ್ತದೆ ಎಂದು ಡೆಪ್ಯುಟಿ ಕಮಿಷನರು ಇದ್ದಾರೆ, ರೆವಿನ್ಯೂ ಡಿಪಾರ್ಟ್‌ಮೆಂಟ್ ಮತ್ತು ಬೇರೆ ಬೇರೆ ಅಂಗಗಳಿವೆ, ವಿಚಾರ ಮಾಡಿಸಿ. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್ ಕೊಟ್ಟಿರತಕ್ಕ ಪರಿಹಾರಕ್ಕಿಂತ, ಅಧಿಕಾರ ದುರುಪಯೋಗವಾಗಿ, ಖಾಸಗಿಯವರು ಶಾಮೀಲಾಗಿ ಒಂದು ವೇಳೆ ಪರಿಹಾರ ಹೆಚ್ಚಿಗೆ ಕೊಟ್ಟಿದ್ದರೆ ಸಭೆಯ ಮುಂದೆ ವರದಿಯನ್ನು ಕೊಡಿ. ನಾನು ಒಪ್ಪಿಕೊಳ್ಳಲಿಕ್ಕೆ ಸಿದ್ಧನಿದ್ದೇನೆ ಸರ್ಕಾರ ಬಂದ ೩ ತಿಂಗಳಿಂದ ಈ ಖಾಯಿಲೆ ಪ್ರಾರಂಭವಾಯಿತು. ಆರ್ಡಿನೆನ್ಸ್ ಹೊರಡಿಸುತ್ತೀರಿ. ನೊಂದ ಹೃದಯದಿಂದ ಹೇಳಬೇಕಾಗುತ್ತದೆ. ಮಾನ್ಯ ಶಿವಪ್ಪನವರೂ ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ೬ ಗಂಟೆ ೧೫ ನಿಮಿಷಕ್ಕೆ ಪ್ರಮಾಲ್‌ಗೇಟ್ ಮಾಡಿದರೆ ಆರ್ಡಿನೆನ್ಸ್ ಹೊರಬಿದ್ದ ತಕ್ಷಣ ಅವರ ಮನೆಗೆ ಖಾಲಿ ಮಾಡು ಎಂದು ನೋಟೀಸ್ ಕೊಡುತ್ತೀರಿ. ಅಧಿಕಾರಿ ಹೋಗಿ ನೋಟೀಸ್ ಜಾರಿ ಇದು ಸರಿಯೇ ? ಮಾಡುತ್ತಾನೆ ಮಾನ್ಯ ರಂಗನಾಥ್ ಅವರು ನನ್ನ ಜೊತೆಗೆ ಧ್ವನಿಗೂಡಿಸುತ್ತಾರೆಂದು ತಿಳಿದುಕೊಂಡಿದ್ದೇನೆ.

ಶ್ರೀ ಟಿ. ಆರ್. ಶಾಮಣ್ಣ.—ಮಂತ್ರಿಗಳು ಅದೇ ಜಾಗದಲ್ಲಿ ೩ ತಿಂಗಳು ಇದ್ದರು.

ಶ್ರೀ ಎಚ್ ಡಿ ದೇವೇಗೌಡ.—ಇದು ಸೌಜನ್ಯಕ್ಕೆ ಮೀರಿದ ವರ್ತನೆ. ಬಹುಶಃ ಎಷ್ಟು ವ್ಯಕ್ತಿದ್ವೇಷ ಇದೆ ಎನ್ನುವುದನ್ನು ಇದು ಒಂದರಿಂದಲೇ ಅರ್ಥಮಾಡಿಕೊಳ್ಳಬಹುದು. ವ್ಯಕ್ತಿ ಯಾರೇ ಇರಲಿ, ಅದು ಮುಖ್ಯವಲ್ಲ. ಎಷ್ಟು ದೂರ ಬೆಳೆಸಿಕೊಂಡು ಹೋದಿರಿ ಅಂದರೆ, ರಾಷ್ಟ್ರದಲ್ಲಿ ಜನತೆಗೆ ಕೊಟ್ಟಿರತಕ್ಕ ಆಶ್ವಾಸನೆಯನ್ನು ಅದರಲ್ಲೂ ದೀನದಲಿತ ವರ್ಗದವರಿಗೆ ಕೊಟ್ಟಿರತಕ್ಕ ಆಶ್ವಾಸನೆಯ ಒಂದು ಕೆಲಸವನ್ನು ಮಾಡತಕ್ಕದ್ದು ಬಹುಶಃ ನಿಮಗೇ ಸೀಮಿತ ದೇಶದಲ್ಲಿ ಬೇರೆ ಯಾರು ಯಾರಿಗೂ ಇಲ್ಲ. ಇದಕ್ಕೆ ನಿದರ್ಶನ

ಇದನ್ನು ಜಾರಿಗೆ ತರುತ್ತೇವೆ ಎನ್ನುವ ನೆಪದಲ್ಲಿ ೧೫ ನಿಮಿಷದಲ್ಲಿ ಖಾಲಿಮಾಡು ಎಂದು ಹೇಳುವುದು ಸಾಲದೆ ? ಹೀಗೆಲ್ಲಾ ಮಾಡಿದರೆ ಹೊಡೆದಾಟವಾಗುತ್ತದೆ ಎಂದು ನಾನು ಹೇಳಿದ್ದೇನೆ. ಆರ್ಡಿನೆನ್ಸ್ ಬಂದ ತಕ್ಷಣ ಮನೆ ಸಾಮಾನುಗಳನ್ನು ಈಚೆ ಹಾಕಲಿಕ್ಕೆ ಹೇಗೆ ಆಗುತ್ತದೆ ?

ಶ್ರೀ ಕಾಗೋಡು ತಿಮ್ಮಪ್ಪ.—ಮಂತ್ರಿಗಳು ಏನು ಮಾಡಿದರು ಹೇಳಿ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಅದಕ್ಕೆ ಹೋಗುವುದಿಲ್ಲ. ಮಂತ್ರಿಗಳಿಗೆ ಕಟುವಾಗಿ ಪತ್ರ ಕೂಡ ಬರೆದೆ. ಟ್ರಾನ್ಸ್‌ಪೋರ್ಟ್ ಮಿನಿಸ್ಟರಿಗೆ ಅಧಿಕಾರ ಹೋದ ಮೇಲೆ ಆ ಬಂಗಲೆಯಲ್ಲಿ ಎಷ್ಟು ದಿವಸ ಇದ್ದರು ? ಮುಖ್ಯ ಮಂತ್ರಿಗಳಿಗೆ ಈ ಮಾತನ್ನು ಹೇಳಿದ್ದೇನೆ, ಪತ್ರ ಬರೆದಿದ್ದೇನೆ. ಇದು ನಮ್ಮ ಸರ್ಕಾರಕ್ಕೆ ಗೌರವ ತರತಕ್ಕದ್ದಲ್ಲ, ಅವರು ಎಷ್ಟು ದಿವಸ ಇದ್ದರು ಅಷ್ಟು ದಿವಸಕ್ಕೆ ಬಾಡಿಗೆ ಕೊಟ್ಟಿರಬಹುದು, ಅದನ್ನು ನಾನು ಕೇಳುವುದಕ್ಕೆ ಹೋಗುವುದಿಲ್ಲ. ನೀವೂ ಸರ್ಕಾರಿ ಬಂಗಲೆಯೊಳಗೆ ಇದ್ದೀರಿ. ಆರ್ಡಿನೆನ್ಸ್ ಬಂದ ಮುಂದಿನ ಘಳಿಗೆಯಲ್ಲೇ ಈ ಒಬ್ಬ ವ್ಯಕ್ತಿಯ ಮನೆಯಲ್ಲಿ ಟೆಲಿಫೋನ್ ಕಟ್ ಮಾಡಿ ಅದನ್ನು ಹೊತ್ತುಕೊಂಡು ಬಂದಿದ್ದಾರೆ. ತಮ್ಮ ಮನಸ್ಸಿನಲ್ಲಿ ಯಾವುದೇ ಪೂರ್ವ ಹಿನ್ನೆಲೆ ಯಿಲ್ಲದೆ ಇದು ಯೋಗ್ಯಕಾರ್ಯವೇ ಎಂದು ನಿರ್ವಿಕಾರ ಚಿತ್ತದಿಂದ ಯೋಚನೆ ಮಾಡಿ. ಈ ಪ್ರಕರಣ ಮುಗಿದಿದೆ ಇಷ್ಟಕ್ಕೆ ಬಿಡುತ್ತೇನೆ ಮಂತ್ರಿಗಳು ಹೋಗಿದ್ದರು, ತಾವೂ ಬಂದಿದ್ದೀರಿ. ನನಗೆ ನಿಮ್ಮಲ್ಲಿ ಪೂರ್ಣ ವಿಶ್ವಾಸ ಇದೆ. ಎಲ್ಲರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಈ ಸಭೆಯಲ್ಲಿ ನಾನು ಎರಡು ವರ್ಷಗಳ ಕಾಲ ವಿರೋಧಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೇನೆ. ಎಲ್ಲರಿಗೂ ಆ ಬಗ್ಗೆ ಸರ್ಟಿಫಿಕೇಟ್ ಕೊಡುವುದಕ್ಕೆ ಹೋಗುವುದಿಲ್ಲ. ಆಸೆ-ಆಕಾಂಕ್ಷೆ ಇಟ್ಟುಕೊಂಡು ಆ ಬಗ್ಗೆ ಮಾತನಾಡಬೇಕಾಗಿಲ್ಲ. ನಾನು ಇಷ್ಟು ಸಲಹೆ ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ಈ ಮಸೂದೆ ನಾವು ಪಾಸ್ ಮಾಡಿಕೊಡುವುದಕ್ಕೆ ಆತುರ ಬೇಡ. ತಾವು ಯೋಚನೆ ಮಾಡಿ. ಪ್ರಮುಖವಾಗಿ ಯೋಚನೆ ಮಾಡಿ. ಇವತ್ತು ನಾವು ಕೊಟ್ಟಿರ ತಕ್ಕ ಆಶ್ವಾಸನೆಯನ್ನು ಈಡೇರಿಸುವುದಕ್ಕೆ ಸರ್ಕಾರಕ್ಕೆ ಸಾಕಷ್ಟು ಶಕ್ತಿ ಬೇಕು, ಕಾನೂನಿನ ಚೌಕಟ್ಟಿನಲ್ಲಿ ಅಧಿಕಾರ ಇರಬೇಕು ಎನ್ನುವ ಏನೊಂದು ವಾದವನ್ನು ಸಭೆಯ ಮುಂದೆ ಇಟ್ಟಿದ್ದೀರಿ, ಅದನ್ನು ನಾನು ಪುಷ್ಟೀಕರಿಸುತ್ತೇನೆ. ಇವತ್ತು ಆಕ್ಟಿನ ತಿದ್ದುಪಡಿ ಮಸೂದೆ ಏನಿದೆ, ಇದರ ಚೌಕಟ್ಟಿನಲ್ಲಿ ನಾನು ಹೇಳುತ್ತೇನೆ ಯಾವನಾದರೂ ಗೌರವ ವ್ಯಕ್ತಿ ಇದ್ದರೆ, ಖಾಸಗಿ ಜೀವನದಲ್ಲಿ ಮುಂದುವರೆಯು ತ್ತೇನೆ ಎನ್ನುವ ಗೌರವ ವ್ಯಕ್ತಿ ಇದ್ದರೆ ಇಲ್ಲಿ ಆತ ಛೇರ್ಮನ್ನಾಗಿ ಕೆಲಸಮಾಡಲು ಬರಲಿಕ್ಕೆ ಸಾಧ್ಯವಿಲ್ಲ. ಆತ್ಮಗೌರವ ಇರತಕ್ಕ ಯಾವ ಒಬ್ಬ ವ್ಯಕ್ತಿ ಬರಲಿಕ್ಕೆ ಸಾಧ್ಯವಿಲ್ಲ.

ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡುವ ಆಸಕ್ತಿಯುಳ್ಳ ವ್ಯಕ್ತಿಗೆ ಇಂತಹ ಸಂಸ್ಥೆಗಳಲ್ಲಿ ಬರೀ ಟಿ. ಎ, ಡಿ.ಎ, ಹಾಗೂ ಸ್ಯಾಲರಿಗೋಸ್ಕರ ಕೆಲಸ ಮಾಡಲು ಇಚ್ಛೆ ಬರುವುದಿಲ್ಲ ಮತ್ತು ಇಲ್ಲಿಗೆ ಸದಸ್ಯರಾಗಿ ಬರಲು ಇಚ್ಛೆ ಬರುವುದಿಲ್ಲ. ಬರೀ ಹೊಟ್ಟೆಯಪಾಡಿಗಾಗಿ ರಾಜಕಾರಣಿಗಳು ಬಂದು ಅವರ ಕರ್ತವ್ಯ ಮಾಡಬೇಕಾಗುತ್ತದೆ ಅವರನ್ನು ಇಂತಹ ಒಂದು ಪರಿಸ್ಥಿತಿಗೆ ಒಯ್ಯಬೇಡಿ ಎಂದು ನಾನು ಹೇಳುತ್ತಿರು ವುದು. ಒಬ್ಬ ಖಾಸಗೀ ಅಧ್ಯಕ್ಷರನ್ನು ಮಾಡಬೇಕೆಂದು ಮಾಡಿ ಅವರೂ ನಿಮ್ಮ ಹಾಗೆ ಒಳ್ಳೆಯ ಧ್ಯೇಯ ವನ್ನು ಇಟ್ಟುಕೊಂಡು ಕೆಲಸ ಮಾಡುವಾಗ ಅವರ ಕತ್ತನ್ನು ಹಿಸುಕುವ ಹಾಗೆ ಮಾಡಲು ಹೋಗಬೇಡಿ. ಆದುದರಿಂದ ಇಂದು ಈ ಬೋರ್ಡಿನಲ್ಲಿ ಏನು ಹಳೆಯ ಕತೆಗಳು ಇದ್ದವೋ ಅವುಗಳೆಲ್ಲಾ ಮುಗಿದಿವೆ. ಹೀಗಿರುವಾಗ ಇದಕ್ಕೆ ಹೊಸದಾಗಿ ತಿದ್ದುಪಡಿ ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ಹಳೆಯ ನೆನಪುಗಳು ಈಗ ಮತ್ತೆ ಮರುಕಳಿಸಲು ಅವಕಾಶವೇ ಇಲ್ಲ. ಈಗ ಇರುವ ಕಾನೂನಿನಂತೆ ಹೌಸಿಂಗ್ ಬೋರ್ಡಿನ ಕಮಿಷನರು ಎಲ್ಲ ಅವರೇ ಇರುತ್ತಾರೆ. ಇವರಿಗೆ ಎಲ್ಲ ಅಧಿಕಾರಗಳೂ ಇವೆ. ಛೇರ್ಮನ್ನರವರಿಗೆ ಟಿ.ಎ, ಡಿ.ಎ., ಇಲ್ಲವೇ ಸಂಬಳ ಬೇಕಾದರೆ ಬಿಲ್ಲನ್ನು ಹಿಡಿದುಕೊಂಡು ಹೋಗಿ ಛೇರ್ಮನ್ನರವರು ಕಮಿಷನರವರ ಹಿಂದು ಮುಂದೆ ತಿರುಗಾಡಬೇಕಾಗುತ್ತದೆ ಹಿಂದೆ ಊಟಿಯಲ್ಲಿ ನಡೆದ ಆಲ್ ಇಂಡಿಯಾ ಹೌಸಿಂಗ್ ಕಮಿಷನರುಗಳ ಕಾನ್‌ಫರೆನ್ಸ್‌ನಲ್ಲಿ ಹೌಸಿಂಗ್ ಕಮಿಷನರುಗಳು ಹೌಸಿಂಗ್ ಬೋರ್ಡುಗಳಲ್ಲಿ ಇರಬೇಕೆ ಬೇಡವೇ ಎನ್ನುವುದು ಅಜೆಂಡಾದಲ್ಲಿ ಒಂದು ಸಬ್‌ಜೆಕ್ಟ್ ಆಗಿತ್ತು. ಇದನ್ನು ಖಾಸಗಿಯವರು ಯಾರೂ ಇಲ್ಲಿಗೆ ಕಳುಹಿಸಿರಲಿಲ್ಲ. ಇದರ ಬಗ್ಗೆ ಆ ಕಾನ್‌ಫರೆನ್ಸ್‌ನಲ್ಲಿ ನಿರ್ಣಯ ಕೂಡ ಮಾಡಿದ್ದಾರೆ. ಹೌಸಿಂಗು ಕಮಿಷನರು ಎನ್ನುವ ಅಧಿಕಾರಿಗಳು ಬೇಕಾಗಿಲ್ಲ ಎಂದು ಅಲ್ಲಿ ನಿರ್ಣಯ ಮಾಡಿದ್ದಾರೆ ಇದರ ಜೊತೆಗೆ ಯಾವುದೇ ರಾಜ್ಯದಲ್ಲೂ ಇಂದು ಹೌಸಿಂಗ್ ಕಮಿಷನರು ಎಂದು ಒಬ್ಬ ಅಧಿಕಾರಿಗಳನ್ನು ನೇಮಕ ಮಾಡಿಲ್ಲ ನಮ್ಮ ಕರ್ನಾಟಕ ರಾಜ್ಯದಲ್ಲಿ ಒಂದರಲ್ಲಿ ಮಾತ್ರ ಹೌಸಿಂಗ್ ಕಮಿಷನರು ಎಂದು ನೇಮಕ ಮಾಡಿದ್ದಾರೆ. ಬಹುಶಃ ನಮ್ಮ ಮುಖ್ಯ ಮಂತ್ರಿಗಳು ಹೇಳುವ ಹಾಗೆ ಕರ್ನಾಟಕ ರಾಜ್ಯ ಮಾದರಿಯಾಗಿ ನಮ್ಮ ರಾಜ್ಯ ದಲ್ಲಿದ್ದ ಪಬ್ಲಿಕ್ ಸರ್ವಿಸ್ ಕಮಿಷನ್ ಸದಸ್ಯರುಗಳ ಸಂಖ್ಯೆಯನ್ನು ಐದರಿಂದ ಏಳಕ್ಕೇರಿಸಿದೆವು. ಇದನ್ನು ಬೇಕಾದರೆ ಇತರ ರಾಜ್ಯಗಳವರೂ ಅನುಕರಣೆ ಮಾಡಲಿ ಎಂದು ಹೇಳುತ್ತಾರೆ. ಅದೇ ರೀತಿ ಇದು ಕರ್ನಾಟಕದ ಹೊಸ ಮಾದರಿಯಾಗಿ ಹೌಸಿಂಗ್ ಕಮೀಷನರು ಎಂದು ಮಾಡಲಾಗಿದೆ ಎಂದು ಮುಖ್ಯ

(ಶ್ರೀ ಕಾಗೋಡು ತಿಮ್ಮಪ್ಪ)

ಮಂತ್ರಿಗಳು ಹೇಳುತ್ತಾರೆ ಇದನ್ನು ಬೇಕಾದರೆ ಇತರರೂ ಅನುಕರಣೆ ಮಾಡಲಿ ಬೇಡ ಎಂದರೆ ಬಿಡಲಿ. ನಾಳೆಯ ದಿನ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಗುಂಡೂರಾಯರು ಚೇರ್ಮನ್ನರಾಗಿ ಏಕಾಗ ಬಾರದು ? ಹೌಸಿಂಗ್ ಕಮಿಷನರು ಇದರಲ್ಲಿರಬೇಕೆಂದು ಹೇಳುತ್ತಾರೆ. ನಮ್ಮ ಮುಖ್ಯ ಮಂತ್ರಿಗಳು ಹೇಳುತ್ತಾ ನಮ್ಮ ಆಡಳಿತದಲ್ಲಿರುವ ಮೆಷಿನರಿ ಯಾವ ರೀತಿ ಇದೆ ಎಂದರೆ ಹಿಂದಿನಿಂದಲೂ ಬಂದಿರುವ ಒಂದು ರೀತಿಯಾದ ಅಧಿಕಾರ ಶಾಹಿ ಪದ್ಧತಿಯ ಮೇಲೆ ಇಂದೂ ಇರುವುದರಿಂದ, ಇಂತಹ ಒಂದು ಬ್ಯೂರಾಕ್ರಟಿಕ್ ಸೆಟ್ ಅಪ್ ಇರುವುದರಿಂದ ಇಲ್ಲಿ ಕೆಲಸಗಳನ್ನು ಮಾಡಲು ಅಡ್ಡಿಯುಂಟಾಗಿದೆ. ಎಂದು ಹೇಳುತ್ತಿದ್ದಾರೆ. ಇಂತಹ ಒಂದು ಸಂದರ್ಭದಲ್ಲಿ ಮಾತ್ರ ಅಧಿಕಾರಿಗಳಿಗೆ ಎಲ್ಲ ಅನುಕೂಲಗಳನ್ನೂ ಕೊಟ್ಟು ಟಿ ಎ , ಡಿ ಎ., ಕೊಟ್ಟು ಇವರನ್ನು ನಾಮಕಾವಸ್ತೆ ಪಟೇಲರ ಹಾಗೆ ಮಾಡಲು ಏಕೆ ಹೋಗುತ್ತೀರಿ ? ಇದರಲ್ಲಿ ಯಾವುದೇ ಇಜ್ಜತ್ ಪ್ರಶ್ನೆ ತರಬೇಡಿ ಆದುದರಿಂದ ದಯವಿಟ್ಟು ಮಾನ್ಯ ಮಂತ್ರಿಗಳು ಇದನ್ನು ವಾಪಸು ತೆಗೆದುಕೊಂಡು ಈಗತಾನೇ ಶ್ರೀಮಾನ್ ಪುಟ್ಟಸ್ವಾಮಿಯವರು ಹೇಳಿದಂತೆ ಸಮಗ್ರವಾದ ಒಂದು ತಿದ್ದುಪಡಿಯನ್ನು ಈಗ ಇರುವ ಕಾನೂನಿಗೆ ತನ್ನಿ. ಕಳೆದ ಆರೇಳು ತಿಂಗಳುಗಳಿಂದ ಏನೇನು ಅವ್ಯವಹಾರಗಳಾಗಿವೆ ಎನ್ನುವುದನ್ನು ಬೇಕಾದರೆ ಸಮಗ್ರವಾಗಿ ವಿಚಾರಣೆ ಮಾಡಿ ಅಲ್ಲಿ ಆಗಿರತಕ್ಕ ನೇಮಕಗಳು ಮತ್ತು ಲೋಕಲ್ ಆಗಿ ನೇಮಕ ಮಾಡಿರುವುದು ಹಾಗೂ ಇನ್ನೇನು ಅವ್ಯವಹಾರಗಳಾಗಿವೆ ಎನ್ನುವುದರ ಪಟ್ಟಿ ಮಾಡಿ ಹೇಳಲಿ ನನ್ನಲ್ಲೂ ಕೂಡ ಇದರ ಪಟ್ಟಿ ಇದೆ. ಕಮಿಷನರ್‌ರವರ ಮನೆಯ ದನದ ಕೊಟ್ಟಿಗೆಯಲ್ಲಿ ಕಾಯಲಿಕ್ಕೆ ನಾಲ್ಕೈದು ಜನರು ಇದ್ದರು. ಹೀಗೆ ಇನ್ನೂ ಏನೇನೋ ವಿವರಗಳೂ ಸಿಗುತ್ತವೆ. ಈಗೇನೋ ನಿಮಗೆ ಬೇಕಾದವರು ಹಾಗೂ ನಮ್ಮ ಮುಖ್ಯ ಮಂತ್ರಿಗಳ ಜಿಲ್ಲೆಯವರನ್ನೇ ಚೇರ್ಮನ್ನರಾಗಿ ಮಾಡಿದ್ದಾರೆ ಅವರಲ್ಲಿ ನಿಮಗೆ ಹೆಚ್ಚು ವಿಶ್ವಾಸ ಇದೆ ಎಂದು ಮಾಡಿದ್ದಾರೆ ಮಾಡಲಿ ಸಂತೋಷ. ಮೈಸೂರು ಜಿಲ್ಲೆಯಿಂದಲೇ ಸಮಾಜವಾದವನ್ನು ತಂದು ಕಾರ್ಯಗತ ಮಾಡಬೇಕೆಂದು ತರುತ್ತಿದ್ದಾರೆ. ತರಲಿ ಇನ್ನು ಗರೀಬೀ ಹಟಾವೋ ಎಂದು ಇನ್ನೇನೋ ಕುತುಗಳನ್ನು ತರುವುದರಲ್ಲಿದ್ದಾರೆ ತರಲಿ. ಅವನ್ನೂ ನೋಡೋಣ ಮುಂದೆ ಗೊತ್ತಾಗುತ್ತದೆ. ನಾನು ಇಷ್ಟು ಮಾತ್ರ ಇಲ್ಲಿ ಹೇಳುತ್ತೇನೆ. ವ್ಯಕ್ತಿ ದ್ವೇಷ ಇಟ್ಟುಕೊಂಡು ಮಾಡಿದಂತಹ ಕೆಲಸಗಳು ಈಗ ಮುಗಿದು ಹೋಗಿದೆ. ಈಗ ಪುನಃ ಅದೇ ವ್ಯಕ್ತಿ ದ್ವೇಷವನ್ನು ಇಟ್ಟುಕೊಂಡು ಇಲ್ಲಿ ಸರಕಾರ ತನ ಅಸ್ತ್ರವನ್ನು ಪಯೋಗಿಸಿಕೊಂಡು ಮಾಡಿರುವುದು ಸರಕಾರ ತನ್ನ ಅಧಿಕಾರದ ದುರುಪಯೋಗದ ಪರಮಾವಧಿ ಎಂದು ಹೇಳಬಹುದು. ಯಾವುದೇ ಜನತಂತ್ರ ಸರಕಾರಕ್ಕೂ ಇದು ಭೂಷಣ ತರತಕ್ಕುದಲ್ಲ ಎಂದು ಇಲ್ಲಿ ಹೇಳಬೇಕಾಗಿದೆ. ಇದರ ಬಗ್ಗೆ ಸಮರ್ಥನೆ ಮಾಡಲು ನಮ್ಮ ಮಾನ್ಯ ಮಂತ್ರಿಗಳಿಗೆ ಈಗ ಬಂದಿರುವುದು ಅವರ ದುರ್ದೈವ. ಇಂತಹ ಕೆಲಸವನ್ನು ಅವರು ಮಾಡಬಾರದಾಗಿತ್ತು. ಇಷ್ಟು ಹೇಳಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಮಂಡಿಸಿರತಕ್ಕ ಕರ್ನಾಟಕ ಹೌಸಿಂಗು ಬೋರ್ಡು ಅಮೆಂಡುಮೆಂಟ್ ಬಿಲ್ಲನ್ನು ಸಮರ್ಥನೆ ಮಾಡುತ್ತಾ ನಾನು ಕೆಲವು ಮಾತುಗಳನ್ನು ಇಲ್ಲಿ ಹೇಳಬಯಸುತ್ತೇನೆ. ಇದು ಬಹಳ ಪ್ರಾಮುಖ್ಯವಾದ ಒಂದು ಬೋರ್ಡ್. ಏಕೆಂದರೆ ಸ್ವಂತ ಮನೆಗಳನ್ನು ಕಟ್ಟಿಸಿಕೊಳ್ಳುವ ಸೌಕರ್ಯ ಎಲ್ಲರಿಗೂ ಸಾಧ್ಯವಿಲ್ಲ. ಜನಸಂಖ್ಯೆಯೂ ಜಾಸ್ತಿಯಾಗುತ್ತಿದೆ. ಇದರಿಂದಾಗಿ ಸರಕಾರದ ಕಾರ್ಯವೂ ಮತ್ತು ಜವಾಬ್ದಾರಿಯೂ ಬಹಳ ಹೆಚ್ಚಾಗಿದೆ. ಸರಕಾರ ತನ್ನ ಕರ್ತವ್ಯವನ್ನು ಜವಾಬುದಾರಿಯುತವಾಗಿ ನಿರ್ವಹಿಸಬೇಕಾದರೆ ಇಂತಹ ಒಂದು ಬೋರ್ಡನ್ನು ಮಾಡಿ ಇದು ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಕೆಲವು ಅಧಿಕಾರಿಗಳನ್ನು ಸಹಾಯಕ್ಕಾಗಿ ಹೊಂದ ಬೇಕಾಗುತ್ತದೆ. ಆ ಕಾರಣದಿಂದ ಇಲ್ಲಿರುವ ತಿದ್ದುಪಡಿ ಮಸೂದೆಯನ್ನೂ ತಂದಿದ್ದಾರೆ. ಈ ಮಸೂದೆಯಲ್ಲಿ ಬಹಳ ಪ್ರಾಮುಖ್ಯವಾದ ಅಧಿಕಾರಿಗಳು ಎಂದರೆ ಹೌಸಿಂಗ್ ಕಮಿಷನರ್‌ರವರು, ಚೀಫ್ ಇಂಜಿನೀಯರ್‌ರವರು ಮತ್ತು ಸೆಕ್ರಟರಿಗಳು. ಇವು ಮೂರು ದೊಡ್ಡ ಹುದ್ದೆಗಳು. ಇದರಲ್ಲಿ ಹೌಸಿಂಗು ಕಮಿಷನರ್‌ರವರ ಜವಾಬುದಾರಿಯೇ ಬಹಳ ಹೆಚ್ಚಾಗಿದೆ. ಈ ಕಾರಣದಿಂದ ಎಲ್ಲ ಅಧಿಕಾರಗಳನ್ನೂ ಸರಕಾರವೇ ತೆಗೆದುಕೊಂಡಿದೆ ಎಂದು ಕೆಲವರು ಇಲ್ಲಿ ಹೇಳಿದರು. ಮತ್ತು ಇಲ್ಲಿರುವ ಅಧ್ಯಕ್ಷರಿಗೆ ಯಾವ ಅಧಿಕಾರವೂ ಇಲ್ಲದಂತಾಗಿದೆ ಎಂದೂ ಸಹ ಹೇಳಿದರು. ಯಾವ ಕೆಲಸಗಳನ್ನು ಮಾಡಬೇಕಾದರೂ ಕೆಲವು ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ ಆದುದರಿಂದ ಇದರ ಉದ್ದೇಶ ಏನಿದೆ ಎಂದರೆ ಬೋರ್ಡಿನಿಂದ ಕೆಲವು ಅಧಿಕಾರಿಗಳನ್ನು ತೆಗೆದುಕೊಂಡು ಸ್ವಲ್ಪ ಹೆಚ್ಚಿನ ಅಧಿಕಾರಗಳನ್ನು ಕಮಿಷನರ್‌ರವರಿಗೆ ಕೊಡಲಾಗಿದೆ. ಚೇರ್ಮನ್ನರಿಗೆ ಇವರ ಮೇಲೆ ಯಾವ ಹಿಡಿತವೂ ಇಲ್ಲ ಎನ್ನುವ ಒಂದು ಮಾತೂ ಹೇಳಿದರು. ಇದನ್ನು ಸುಲಭವಾಗಿ ಒಪ್ಪುವುದಕ್ಕಾಗುವುದಿಲ್ಲ ದರಲ್ಲಿರುವ ಸೆಕ್ಷನ್ ೨೦ಬಿ ನಲ್ಲಿ

"**Power of Board to require returns, reports, production of documents etc.,—**

(1) The Board may require the Housing Commissioner to furnish it with ,—

(a) any return, statement, estimate, statistics or other information regarding any matter pertaining to the administration of this Act......

(2) The Housing Commissioner shall comply with every requisition without reasonable delay ಯಾವಾಗಲೂ ಒಬ್ಬ ಅಧ್ಯಕ್ಷರು ಸರಿಯಾಗಿ ಕೆಲಸ ಮಾಡಲು ಅನುಕೂಲವಾಗುವಂತೆ ಈ ಕಲಂ ಇಡಲಾಗಿದೆ. ಇದರಲ್ಲಿ ಬೋರ್ಡ್ ಅಧಿಕಾರಿಗಳನ್ನು ಒಂದು ರೀತಿಯಾದ ಹಿಡಿತದಲ್ಲಿ ಇಟ್ಟುಕೊಳ್ಳುವುದಕ್ಕೆ ಅವಕಾಶವಿದೆ. ಇದನ್ನು ಒಪ್ಪುವುದು ಬಿಡುವುದು ಅಧ್ಯಕ್ಷರಿಗೆ ಸೇರಿದ್ದು. ಅಧ್ಯಕ್ಷರೂ ತಮ್ಮ ನಿಯಮಗಳ ಮಿತಿಯಲ್ಲಿ ಕೆಲಸ ಮಾಡಬೇಕು. ಇದರ ಬಗ್ಗೆ ಒಂದು ಸಲಹೆ ಮಾಡಬಯಸುತ್ತೇನೆ. ಕಮಿಷನರ್ ರವರನ್ನು ನೇಮಕ ಮಾಡುವಾಗ ಅಧ್ಯಕ್ಷರನ್ನು ಕೇಳಿ ಸರಕಾರದವರು ಮಾಡಿದರೆ ಅದು ಸೂಕ್ತವಾಗಿರುತ್ತದೆ. ಇಂತಹ ಒಂದು ತಿದ್ದುಪಡಿಯನ್ನು ಇದರಲ್ಲಿ ಸೇರಿಸಿದರೆ ಒಳ್ಳೆಯದು. ಎಂಬುದಾಗಿ ನನ್ನ ಭಾವನೆ ಮತ್ತು ಅಧ್ಯಕ್ಷರಿಗೇ ಲೀವ್ ಇತ್ಯಾದಿ ಕೊಡತಕ್ಕ ಅಧಿಕಾರಗಳನ್ನೂ ಕೊಡುವುದು ಸೂಕ್ತ ಅಧ್ಯಕ್ಷರವರೊಡನೆ ಹೊಂದಾಣಿಕೆಯಿಂದ ಕೆಲಸ ಮಾಡಿದರೆ ಅನುಕೂಲವಾಗುತ್ತದೆ. ಇದಕ್ಕೆ ಒಂದು ಉದಾಹರಣೆ ಹೇಳಬೇಕಾದರೆ ಈಗ ಇರತಕ್ಕ ತಾಲ್ಲೂಕಾ ಬೋರ್ಡುಗಳು ಹಾಗೂ ಬಿ ಡಿ ಓ ಗಳು ಎಂದು ಇರುತ್ತಾರೆ. ಇವರಿಬ್ಬರೂ ಹೊಂದಾಣಿಕೆಯಿಂದ ಅವರವರ ಕೆಲಸಗಳನ್ನು ಮಾಡಿದರೆ ಸರಿಯಾಗಿರುತ್ತದೆ, ಇಲ್ಲದೆ ಬಿ. ಡಿ ಓ. ಗೂ ತಲ್ಲೂಕಾ ಬೋರ್ಡಿನ ಅಧ್ಯಕರಿಗೂ ಹೊಂದಾಣಿಕೆ ಇಲ್ಲದಿದ್ದರೆ ಬಿ.ಡಿ.ಓ. ಯಾವ ಸಹಾಯ ಕೊಡುವುದಿಲ್ಲ ಜೀಪು ಬಿ. ಡಿ. ಓ ಕೈಯಲ್ಲಿದೆ. ನನ್ನ ಕ್ಷೇತ್ರದ ತಾಲ್ಲೂಕಿನಲ್ಲಿ ಒಂದು ಸಾರಿ ಇಂತಹ ಪ್ರಸಂಗ ಬಂದಿತ್ತು. ತಾಲ್ಲೂಕು ಬೋರ್ಡ್ ಅಧ್ಯಕ್ಷರು ಬಿ. ಡಿ. ಓ. ರವರನ್ನು ಜೀಪ್ ಕೇಳಿದರೆ ಅವರು ಕೊಡಲಾಗುವುದಿಲ್ಲ ಎಂದು ಹೇಳಿದರು. ಇಂತಹ ಒಂದು ಪರಿಸ್ಥಿತಿ ಆಗ ಬಂತು. ಡ್ರೈವರ್ ಬಿ. ಡಿ. ಓ. ಅಧೀನದಲ್ಲಿ ಇದ್ದಿದ್ದರಿಂದ ಆತ ಬಿ.ಡಿ.ಓ. ಹೇಳಿದಂತೆ ಕೇಳುತ್ತಿದ್ದ. ಇದರಿಂದ ಅಧ್ಯಕ್ಷರು ಕಛೇರಿಗೆ ನಡೆದುಕೊಂಡು ಬಂದು ಮತ್ತೆ ಮನೆಗೆ ನಡೆದುಕೊಂಡು ಹೋಗುತ್ತಿದ್ದರು. ಅವರ ಎದುರಿನಲ್ಲಿಯೇ ಬಿ.ಡಿ.ಓ. ಜೀಪಿನಲ್ಲಿ ಮನೆಗೆ ಹೋಗುತ್ತಿದ್ದ. ಇಂತಹ ಒಂದು ಪರಿಸ್ಥಿತಿ ಇಲ್ಲಿಯೂ ಬರುವುದಕ್ಕೆ ಅವಕಾಶವಿದೆ. ಆದಕಾರಣ ಕಮೀಷನರ್ ಅವರನ್ನು ಅಪಾಯಿಂಟ್ ಮಾಡಬೇಕಾದರೆ ಅಧ್ಯಕ್ಷರನ್ನು ಕೇಳಿ ಮಾಡುವುದು ಒಳ್ಳೆಯದು ಮತ್ತು ಅವರ ಲೀವ್ ವಗೈರೆ ಮಂಜೂರು ಮಾಡುವ ಅಧಿಕಾರವನ್ನು ಸಹ ಅಧ್ಯಕ್ಷರಿಗೆ ಕೊಡುವುದು ಒಳ್ಳೆಯದು ಎಂದು ಹೇಳಬಯಸುತ್ತೇನೆ. ಪ್ರತಿಯೊಂದು ಕೆಲಸಗಳೂ ಚೆನ್ನಾಗಿ ಮತ್ತು ಜಾಗ್ರತೆ ನಡೆಯಬೇಕಾದರೆ ಅಧ್ಯಕ್ಷರಿಗೆ ಕೆಲವು ಅಧಿಕಾರಗಳನ್ನು ಕೊಡುವುದು ಅನಿವಾರ್ಯವಾಗಿದೆ. ೨೦೦ ರೂಪಾಯಿಗಳಿಗಿಂತ ಹೆಚ್ಚು ಸಂಬಳ ಬರುವ ನೌಕರರನ್ನು ಅಪಾಯಿಂಟ್ ಮಾಡುವ ಅಧಿಕಾರಗಳನ್ನು ಪಿ.ಎಸ್.ಸಿ.ಗೆ ಬಿಟ್ಟಿರುವುದು ಸಹ ಬಹಳ ಒಳ್ಳೆಯದಾಗಿದೆ. ಮತ್ತು ಅದಕ್ಕಿಂತ ಕಡಿಮೆ ಸಂಬಳ ಬರುವವರನ್ನು ಅಪಾಯಿಂಟ್ ಮಾಡಿಕೊಳ್ಳಲು ಬೋರ್ಡ್‌ಗೆ ಅಧಿಕಾರ ಕೊಡಲಾಗಿದೆ. ಮತ್ತು ಹರಿಜನ ಮತ್ತು ಗಿರಿಜನರಿಗೆ ಕೆಲಸಗಳನ್ನು ಮೀಸಲಿಡುವ ಬಗ್ಗೆ ಸಹ ಇದರಲ್ಲಿ ಅವಕಾಶ ಮಾಡಿಕೊಡಲಾಗಿದೆ. ಇದು ಬಹಳ ಪ್ರಾಮುಖ್ಯವಾದ ಅಂಶ. ಇದರಿಂದ ಹಿಂದುಳಿದ ಮತ್ತು ದಲಿತವರ್ಗದವರಿಗೆ ರಕ್ಷಣೆ ಕೊಟ್ಟಂತೆ ಆಗಿದ. ಹಿಂದೆ ಇದ್ದ ಕಾನೂನಿನಲ್ಲಿ ಕೆಲವು ತೊಡಕುಗಳು ಇದ್ದವು. ಆ ತೊಡಕುಗಳು ಏನು ಎಂಬುದನ್ನು ಮಾನ್ಯ ಸದಸ್ಯರು ಹೇಳಿದ್ದಾರೆ ಮತ್ತು ಮಾನ್ಯ ಕೆ. ಪುಟ್ಟಸ್ವಾಮಿಯವರು ಬಹಳ ಸವಿಸ್ತಾರವಾಗಿ ಹೇಳಿದ್ದಾರೆ. ಈ ಹಿಂದಿನ ಕಾನೂನಿನ ಪ್ರಕಾರ ಏನಾದರು ಸಮಸ್ಯೆಗಳು ಬಂದಾಗ ಸರ್ಕಾರ ಸುಮ್ಮನೆ ಕೈಕಟ್ಟಿಕೊಂಡು ಕುಳಿತುಕೊಂಡಿರಬೇಕಾಗುತ್ತಿತ್ತು ಅದನ್ನು ತಪ್ಪಿಸುವ ದೃಷ್ಟಿಯಿಂದಲೇ ಈ ತಿದ್ದುಪಡಿ ಮಸೂದೆಯನ್ನು ತರಬೇಕಾಯಿತು. ಈಗ ಸರ್ಕಾರದವರು ಸರಾಗವಾಗಿ ಕೆಲಸ ಮಾಡುವುದಕ್ಕೆ ಅವಕಾಶ ಸಿಕ್ಕಿದಂತೆ ಆಗಿದೆ. ಸರ್ಕಾರ ಮನಸ್ಸು ಮಾಡಿದ್ದರೆ ಪ್ರತಿ ಕೆಲಸಕ್ಕೂ ಸರ್ಕಾರದ ಅನುಮತಿ ಪಡೆಯಬೇಕು ಎಂದು ಹೇಳಬಹುದಾಗಿತ್ತು. ಆದರೆ ಆ ರೀತಿ ಮಾಡದೆ ಕೆಲವು ಲಕ್ಷ ರೂಪಾಯಿಗಳವರೆಗೆ ಬೋರ್ಡಿನವರೇ ಮಂಜೂರು ಮಾಡಬಹುದು, ಜಾಸ್ತಿಯಾದರೆ ಸರ್ಕಾರದ ಅನುಮತಿಗೆ ಕಳಿಸಬೇಕು ಎಂದು ಇಲ್ಲಿ ಹೇಳಿದ್ದಾರೆ. ಆದರೆ ಇದನ್ನು ನಿರ್ದಿಷ್ಟವಾಗಿ ಹೇಳಿದರೆ ಚೆನ್ನಾಗಿರುತ್ತಿತ್ತು ಅಂದರೆ ೧೦ ಲಕ್ಷ ರೂಪಾಯಿಗಳೊಳಗೆ ಇದ್ದರೆ ಬೋರ್ಡಿನವರೇ ಮಾಡಬಹುದು. ಅದಕ್ಕಿಂತ ಜಾಸ್ತಿಯಿದ್ದರೆ ಸರ್ಕಾರದ ಮಂಜೂರಾತಿಗಾಗಿ ಕಳುಹಿಸಬೇಕು ಎಂದು ಹೇಳಿದ್ದರೆ ಚೆನ್ನಾಗಿರು

(ಶ್ರೀ ಕೆ. ಎಂ. ರುದ್ರಪ್ಪ)

ತ್ತಿತ್ತು. ಮಾನ್ಯ ಕಾಗೋಡು ತಿಮ್ಮಪ್ಪನವರು ಮಾತನಾಡುವಾಗ ಈ ಬೋರ್ಡಿನ ಪರಿಪೂರ್ಣ ಸ್ವಾಯತ್ತತೆ ವಿಚಾರವಲ್ಲಿ ಪ್ರಸ್ತಾಪ ಮಾಡಿ, ಅದಕ್ಕೆ ಎಲ್ಲ ಅಧಿಕಾರಗಳು ಸಹ ಇರಬೇಕೆಂದು ಆದರೆ ಅದು ಸರಿಯಲ್ಲ ಏಕೆಂದರೆ ಅದು ಇಂದು ದೊಡ್ಡ ಬೋರ್ಡ್ ಆಗಿದೆ. ಅದಕ್ಕೆ ಹಣವನ್ನು ಒದಗಿಸುವ ಜವಾಬ್ದಾರಿ ಸರ್ಕಾರಕ್ಕೆ ಇದೆ. ಬೋರ್ಡಿನವರೇ ಹಣವನ್ನು ಒದಗಿಸಿಕೊಳ್ಳುವ ಸ್ಥಿತಿಯಲ್ಲಿ ಇಲ್ಲದಿರುವುದರಿಂದ ಸರ್ಕಾರವೇ ಕೋಟಿಗಟ್ಟಲೆ ಹಣವನ್ನು ಒದಗಿಸ ಬೇಕಾಗಿರುವುದರಿಂದ, ಅದು ಸರಿಯಾಗಿ ಕೆಲಸ ಮಾಡದಿದ್ದಾಗ ಸರ್ಕಾರ ಸುಮ್ಮನೆ ನೋಡಿಕೊಂಡು ಕೈಕಟ್ಟಿ ಕುಳಿತುಕೊಂಡಿರುವುದಕ್ಕಾಗುವುದಿಲ್ಲ. ಈ ದೃಷ್ಟಿಯಿಂದ ಸರಕಾರ ಸ್ವಲ್ಪ ಅಧಿಕಾರವನ್ನು ತೆಗೆದು ಕೊಂಡಿರುವುದು ನ್ಯಾಯವೇ ಆಗಿದೆ. ಸರ್ಕಾರ ತನ್ನ ಒಂದು ಉದ್ದೇಶವನ್ನು ಪರಿಣಾಮಕಾರಿಯಾಗಿ ಸಾಧನೆ ಮಾಡಬೇಕಾದರೆ ಈ ರೀತಿ ಅಧಿಕಾರ ಇಟ್ಟುಕೊಳ್ಳಬೇಕಾಗುತ್ತದೆ. ಆದರೆ ಇದರಿಂದ ಸ್ಟಾಚ್ಯೂಟರಿ ಪವರ್‌ನ್ನು ಮೊಟಕು ಮಾಡಿದಂತೆ ಆಗುವುದಿಲ್ಲ. ಅಲ್ಲಿಯು ಅಧ್ಯಕ್ಷರು ಪರಿಣಾಮಕಾರಿಯಾಗಿ ಕೆಲಸ ಮಾಡುವವರೆಗೆ ಸರ್ಕಾರದಿಂದ ಯಾವ ಅಡ್ಡಿಯೂ ಬರುವುದಿಲ್ಲ. ಒಳ್ಳೆಯ ವರನ್ನೇ ಅಧ್ಯಕ್ಷರನ್ನಾಗಿ ಸರ್ಕಾರದವರು ಈ ಬೋರ್ಡಿಗೆ ನೇಮಕ ಮಾಡುತ್ತಾರೆ ಮತ್ತು ಅವರ ಜೊತೆಗೆ ಕೆಲಸ ಮಾಡಲು ಉತ್ತಮ ಸರ್ಕಾರಿ ಅಧಿಕಾರಿಗಳು ಇರುತ್ತಾರೆ. ಅವರು ಮಾಡುವ ಕೆಲಸ ಸರಿಯಾಗಿದೆಯೋ ಅಥವಾ ಇಲ್ಲವೇ ಎಂಬುದನ್ನು ಸರ್ಕಾರ ನೋಡಬೇಕಾಗುತ್ತದೆ. ಆದಕ್ಕಾಗಿ ಸ್ವಲ್ಪ ಅಧಿಕಾರವನ್ನು ಸರ್ಕಾರ ಇಟ್ಟುಕೊಂಡಿದೆ. ಇದರಿಂದ ಬೋರ್ಡಿನ ಸ್ವಾಯತ್ತತೆ ಸ್ವಲ್ಪ ಮೊಟಕಾದರೂ ಸಹ ಅದನ್ನು ನಾವು ಸಹಿಸಿಕೊಳ್ಳಬೇಕಾಗುತ್ತದೆ ಈಗ ಕೆಲವು ಕೋಆಪರೇಟಿವ್ ಸೊಸೈಟಿಗಳನ್ನೇ ತೆಗೆದುಕೊಂಡರೂ ಸಹ ಅಲ್ಲಿ ಹಣ ದುರ್ವಿನಿಯೋಗವಾಗುತ್ತಿರುವುದು ಸರ್ಕಾರಕ್ಕೆ ಕಂಡು ಬಂದರೂ ಸಹ ಅದರ ಬಗ್ಗೆ ಸರ್ಕಾರ ತನ್ನ ಅಧಿಕಾರವನ್ನು ಚಲಾಯಿಸುವುದಕ್ಕೆ ಕಾನೂನಿನ ಚೌಕಟ್ಟಿನಲ್ಲಿ ಸಾಧ್ಯವಾಗುತ್ತಿಲ್ಲ. ಮತ್ತು ಆ ಸೊಸೈಟಿಗಳನ್ನು ತಹಬಂದಿಗೆ ತರುವುದಕ್ಕಾಗುತ್ತಿಲ್ಲ. ಈ ಕಾರಣದಿಂದ ಇಲ್ಲಿ ಸರ್ಕಾರ ಸ್ವಲ್ಪ ಅಧಿಕಾರವನ್ನು ತನ್ನ ಕೈಯಲ್ಲಿ ಇಟ್ಟುಕೊಂಡಿದೆ. ಹಿಂದೆ ಇದ್ದ ಅಧ್ಯಕ್ಷರನ್ನು ತೆಗೆಯುವುದಕ್ಕೋಸ್ಕರ ಈ ತಿದ್ದುಪಡಿ ಮಸೂದೆಯನ್ನು ಸರ್ಕಾರದವರು ತಂದಿದ್ದಾರೆಂದು ಮಾನ್ಯ ದೇವೇಗೌಡರು ಹೇಳಿದರು. ಆದರೆ ಅದು ಸರಿಯಲ್ಲ ; ಅಧ್ಯಕ್ಷರು ಬರುತ್ತಾರೆ, ಹೋಗುತ್ತಾರೆ ; ಅದು ಮುಖ್ಯವಲ್ಲ ; ಸರ್ಕಾರದ ಉದ್ದೇಶ ಈ ಬಗ್ಗೆ ಏನಿದೆ ಎಂದರೆ, ವಸತಿಗೃಹಗಳ ನಿರ್ಮಾಣ ಜಾಗ್ರತೆಯಾಗಬೇಕು, ಪರಿಣಾಮಕಾರಿಯಾಗಿ ಕೆಲಸವಾಗಬೇಕು, ಕಟ್ಟತಕ್ಕ ಮನೆಗಳು ಸುಭದ್ರವಾಗಿರಬೇಕು ಮತ್ತು ಆ ಮನೆಗಳು ಮಧ್ಯಮವರ್ಗದವರಿಗೆ ಮತ್ತು ಬಡವರಿಗೆ ಸಿಕ್ಕುವ ರೀತಿಯಲ್ಲಿರಬೇಕು ಎಂದು. ಆದಕಾರಣ ಮಾನ್ಯ ದೇವೇಗೌಡರು ಹೇಳಿದ ಅಂಶ ಸರಿಯಲ್ಲವೆಂದು ಹೇಳುತ್ತೇನೆ ಈ ಬೋರ್ಡಿನ ಅಧ್ಯಕ್ಷರ ಹುದ್ದೆಯು ಆರ್ನಮೆಂಟಲ್ ಪೋಸ್ಟ್ ಆಗಿದೆ ಎಂದು ಕೆಲವರು ಹೇಳಿದ್ದು ಸರಿಯಲ್ಲ ; ಅವರು ಎಲ್ಲರನ್ನೂ ತಮ್ಮ ಹತೋಟಿಯಲ್ಲಿಟ್ಟುಕೊಂಡು ಕೆಲಸ ಮಾಡುವುದಕ್ಕೆ ಇಲ್ಲಿ ಅವಕಾಶವಿದೆ. ನಾನು ಮಾಡಿದಂತಹ ಎರಡು ಮೂರು ಸಲಹೆಗಳನ್ನು ಮಾನ್ಯ ಮಂತ್ರಿಗಳು ಅಂಗೀಕಾರ ಮಾಡಿದರೆ ಬಹಳ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ. ಈ ಮೊದಲು ಈ ಬೋರ್ಡಿನಲ್ಲಿ ೧೨ ಜನ ಸದಸ್ಯರು ಇರುತ್ತಿದ್ದರು. ಈಗ ಅದನ್ನು ೧೫ಕ್ಕೆ ಹೆಚ್ಚು ಮಾಡಿದ್ದಾರೆ. ನಮ್ಮ ರಾಜ್ಯದ ಜನಸಂಖ್ಯೆ ಜಾಸ್ತಿಯಾಗುತ್ತಿರುವುದರಿಂದ ಸಮಸ್ಯೆಗಳು ಸಹ ಜಾಸ್ತಿಯಾಗುತ್ತಿರುತ್ತವೆ. ಆದಕ್ಕಾಗಿ ಈ ಸಂಖ್ಯೆಯನ್ನು ಹೆಚ್ಚು ಮಾಡಿದ್ದು ಸರಿಯಾಗಿದೆ. ಜೊತೆಗೆ ಎಲ್ಲ ವರ್ಗದವರಿಗೆ ಅಲ್ಲಿ ಸದಸ್ಯತ್ವ ಕೊಡಬೇಕಾಗಿರುವುದರಿಂದ ಅದರ ಸಂಖ್ಯೆಯನ್ನು ಹೆಚ್ಚು ಮಾಡಿದ್ದಾರೆ. ಇದರಲ್ಲಿ ದುರುದ್ದೇಶವೇನೂ ಇಲ್ಲ. ಇದೂ ಸಹ ಸರಿಯಾಗಿಯೇ ಇದೆ. ಮತ್ತೊಂದು ಪ್ರಾಮುಖ್ಯವಾದ ಅಂಶವನ್ನು ವಿರೋಧಪಕ್ಷದ ಸದಸ್ಯರು ಹೇಳಿದರು ; ಏನೆಂದರೆ. ಚೇರ್‌ಮನ್ ಅವರು ಮತ್ತು ಬೋರ್ಡಿನ ಸದಸ್ಯರು ಸರ್ಕಾರ ಇಷ್ಟಪಡುವವರೆಗೆ ಅಧಿಕಾರದಲ್ಲಿರುತ್ತಾರೆಂದು ಇಲ್ಲಿ ಹೇಳಿರುವುದು ಸರಿಯಲ್ಲ ಎಂದು. ಈ ಒಂದು ಅಧಿಕಾರವನ್ನು ಸರ್ಕಾರ ಹೊಂದಿದ್ದರೂ ಸಹ ಅದನ್ನು ಸಿಕ್ಕಾಪಟ್ಟೆ ಆರ್ಬಿಟರರಿಯಾಗಿ ಉಪಯೋಗ ಮಾಡುವುದಿಲ್ಲ. ಅಧ್ಯಕ್ಷರು ಮತ್ತು ಬೋರ್ಡು ಸದಸ್ಯರು ಸರಿಯಾಗಿ ಕೆಲಸಮಾಡಿಕೊಂಡು ಹೋಗುವವರೆಗೆ ಬಾಧಕವಿಲ್ಲ. ಅವರು ಸರಿಯಾಗಿ ಕೆಲಸ ಮಾಡದಿದ್ದಾಗ ಮಾತ್ರ ಸರ್ಕಾರ ತನ್ನ ಅಧಿಕಾರವನ್ನು ಚಲಾಯಿಸಬೇಕಾಗುತ್ತದೆ. ಆದಕಾರಣ ಇದರ ಬಗ್ಗೆ ಯಾರೂ ಹೆದರಬೇಕಾಗಿಲ್ಲ. ಪಬ್ಲಿಕ್ ಒಪೀನಿಯನ್‌ಗೆ ವಿರುದ್ಧವಾಗಿ ಸರ್ಕಾರ ಯಾವ ಕೆಲಸವನ್ನೂ ಸಹ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆ ರೀತಿ ಏನಾದರು ಮಾಡಿದರೆ ಆಗ ಕಷ್ಟ ಬರುತ್ತದೆ. ಈ ಒಂದು ಅಧಿಕಾರವನ್ನು ಇಟ್ಟುಕೊಂಡಿರುವುದಕ್ಕೆ ಕಾರಣವೇನು ಎಂದರೆ, ಹಿಂದಿನ ಅಧ್ಯಕ್ಷರಿಗೆ ಸರ್ಕಾರದವರು ಒಂದು ನೋಟೀಸ್ ಕೊಟ್ಟಿದ್ದಕ್ಕೆ ಅದರ ವಿರುದ್ಧವಾಗಿ ಅವರು ಹೈಕೋರ್ಟಿಗೆ ಹೋದರು ; ಈ ಕಾರಣದಿಂದ ಸರ್ಕಾರ ಈ ಒಂದು ಅಧಿಕಾರವನ್ನು ಇಟ್ಟುಕೊಳ್ಳಬೇಕಾಗಿಬಂತು ಅದನ್ನು ರೇರ್ ಅಕೇಷನ್‌ನಲ್ಲಿ ವಿಶೇಷ ಸಂದರ್ಭದಲ್ಲಿ ಮಾತ್ರ ಉಪಯೋಗ ಮಾಡುತ್ತದೆಯೋ ಹೊರತು ಸಿಕ್ಕಾಪಟ್ಟೆ ಉಪ

ಯೋಗ ಮಾಡುವುದಿಲ್ಲ. ಈ ಬಗ್ಗೆ ಯಾರೂ ಶಂಕೆ ಪಡಬೇಕಾಗಿಲ್ಲ. ಒಟ್ಟಿನಲ್ಲಿ ಹೇಳಬೇಕಾದರೆ ಈ ಹಿಂದೆ ಇದ್ದ ಕಾನೂನಿಗೆ ತಿದ್ದುಪಡಿ ತರುವ ಆವಶ್ಯಕತೆ ಇತ್ತು: ಅದಕ್ಕಾಗಿ ಇಲ್ಲಿ ತಿದ್ದುಪಡಿಯನ್ನು ಮಾನ್ಯ ಸಚಿವರು ಮಂಡನೆ ಮಾಡಿದ್ದಾರೆ. ಜನತೆಗೆ ವಸತಿಗೃಹಗಳನ್ನು ಕಟ್ಟಿಸಿಕೊಡುವ ಜವಾಬ್ದಾರಿ ಸರ್ಕಾರಕ್ಕೆ ಇರುವುದರಿಂದ, ಆ ಕೆಲಸವನ್ನು ಜಾಗ್ರತೆ ಮಾಡಲು ಅವಕಾಶವಾಗುವಂತೆ ಈ ತಿದ್ದುಪಡಿ ತಂದಿದ್ದಾರೆ. ಆದಕಾರಣ ಇದನ್ನು ನಾವು ಒಪ್ಪಬಹುದು ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

11-30 A. M.

ಶ್ರೀ ಕೆ. ಎಚ್. ರಂಗನಾಥ್ (ಸಾರಿಗೆ ಹಾಗೂ ವಸತಿ ಮಂತ್ರಿಗಳು) —ಸನ್ಮಾನ್ಯ ಅಧ್ಯಕ್ಷರೇ, ಈ ಮಸೂದೆಯ ಮೇಲೆ ಸಾಕಷ್ಟು ಚರ್ಚೆಯಾಗಿದೆ. ಈ ಮಾನ್ಯ ಸಭೆಯ ಸದಸ್ಯರು ತಮ್ಮ ಈ ಮಸೂದೆಯ ಮೇಲೆ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಅದರಲ್ಲೂಕೂಡ ಈಗತಾನೆ ಮಾತನಾಡಿದಂತಹ ಕೆ. ಪುಟ್ಟಸ್ವಾಮಿಯವರು ಕಲಂ ಅನ್ವಯ ತಮ್ಮ ಅಭಿಪ್ರಾಯವನ್ನು ಕೊಟ್ಟು ಹೆಚ್ಚು ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಪ್ರಾಮುಖ್ಯವಾಗಿ ಶ್ರೀಮಾನ್ ಶಾಮಣ್ಣನವರು ಬಂಗಾರಪ್ಪನವರು ಕಾಗೋಡು ತಿಮ್ಮಪ್ಪನವರು ಮುಂತಾದ ಮಾನ್ಯ ಸದಸ್ಯರು ಪ್ರಾಮುಖ್ಯವಾಗಿ ಸೆಕ್ಷನ್ 5ರಲ್ಲಿ ಛೇರ್ಮನ್ ಮತ್ತು ಸದಸ್ಯರ ಕಾಲವನ್ನು ಮಿತಿ ಮಾಡುವುದರ ಒಂದು ಅವಧಿಯನ್ನು ನಿಗದಿ ಮಾಡುವುದರ ಬದಲು ''ಡ್ಯೂರಿಂಗ್ ದಿ ಪ್ಲೆಜರ್ ಆಫ್ ದಿ ಗೌರ್ನಮೆಂಟ್ ಎಂದು ಪ್ರಸ್ತಾಪ ಮಾಡಲಾಗಿದೆ ಎಂದು ಇದರ ಬಗ್ಗೆ ಹೆಚ್ಚು ಟೀಕೆ ಮಾಡಿದ್ದಾರೆ. ಶ್ರೀ ಮಾನ್ ದೇವೇಗೌಡರು ಮತ್ತೆ ಕೆಲವು ಸದಸ್ಯರು ಹಿಂದೆ ಹೌಸಿಂಗ್ ಬೋರ್ಡಿನಲ್ಲಿದ್ದ ಛೇರ್ಮನ್ ಅವರನ್ನು ತೆಗೆಯುವ ಉದ್ದೇಶದಿಂದ ಈ ಒಂದು ಕಾನೂನನ್ನು ಬಿಲ್‌ಅನ್ನು ಆರ್ಡಿನೆನ್ಸ್ ನ ಪದಲ್ಲಿ ಬಂದಿದೆ ಎಂದು ಪ್ರಸ್ತಾಪಮಾಡಿದ್ದಾರೆ. ನಾನು ಈ ಮಾನ್ಯ ಸಭೆಗೆ ಈಗಾಗಲೇ ತಿಳಿಸಿದ್ದೇನೆ. ಯಾವ ಒಬ್ಬ ವ್ಯಕ್ತಿಯನ್ನೂ ಗಮನದಲ್ಲಿಟ್ಟುಕೊಂಡು ಈ ಕಾನೂನನ್ನು ತರಲಿಲ್ಲ. ಇವೊತ್ತಿ ದಿವಸ ನನ್ನ ಉತ್ತರವನ್ನು ಬಹುಪಾಲು ಶ್ರೀಮಾನ್ ಪುಟ್ಟಸ್ವಾಮಿಯವರು ಹಗುರ ಮಾಡಿದ್ದಾರೆ ಎಂದರೆ ತಪ್ಪಾಗಲಾರದು. ಎಲ್ಲಾ ನೇಮಕಗಳೂ ರಾಜಕೀಯ ನೇಮಕಗಳು. ಇದರಲ್ಲಿ ಬಿನ್ನಾಭಿಪ್ರಾಯವಿಲ್ಲ ಎಂದರೆ ನಾನು ತಿಳಿದುಕೊಂಡಿದ್ದೇನೆ. ಯಾವ ಸರ್ಕಾರ ಅಧಿಕಾರಕ್ಕೆ ಬರುತ್ತದೆ ಅದು ಒಂದು ನಿಗದಿಯಾದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. Whether it is the industrial policy land reforms or any other program ಇವುಗಳನ್ನು ಒಂದು ನಿಗದಿಯಾದ ಕಾರ್ಯಕ್ರಮ ಪನು ಗೊತ್ತುಮಾಡುವ ಸಮಯದಲ್ಲಿ ಅವುಗಳನ್ನು ಶೀಘ್ರವಾಗಿ ಮಾಡುವುದಕ್ಕೆ ಅನುಕೂಲವಾಗತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಈ ಒಂದು ಹಿನ್ನೆಲೆಯಲ್ಲಿ ಈ ತಿದ್ದುಪಡಿಯನ್ನು ನೋಡುವುದಾದರೆ ಇದಕ್ಕೆ ಅನುಕೂಲವಾದ ರೀತಿಯಲ್ಲಿ ಈ ತಿದ್ದುಪಡಿ ಇದೆಯೇ ಹೊರತು ಯಾವುದೇ ವ್ಯಕ್ತಿಯನ್ನು ಗಮನದಲ್ಲಿಟ್ಟುಕೊಂಡು ಇದನ್ನು ಮಾಡಿಲ್ಲ. ಯಾವುದೇ ಸರ್ಕಾರ ಆಡಳಿತಕ್ಕೆ ಬಂದರೂ ಕೂಡ ತಮ್ಮ ಕಾರ್ಯಕ್ರಮವನ್ನು ಚನ್ನಾಗಿ ಮಾಡುವುದಕ್ಕೆ ಅನುಕೂಲವಾಗತಕ್ಕ ರೀತಿಯಲ್ಲಿ ಸರ್ಕಾರ ತನ್ನ ಅಧಿಕಾರವನ್ನು ಬಳಸಿಕೊಂಡು ಕೆಲಸಮಾಡುವುದಕ್ಕೆ ಅನುಕೂಲವಾದ ರೀತಿಯಲ್ಲಿ ಈ ತಿದ್ದುಪಡಿ ಬಂದಿದೆ ಎಂದು ನಾನು ಈ ಸಭೆಯ ಗಮನಕ್ಕೆ ತರುತ್ತೇನೆ ಇವೊತ್ತಿ ದಿವಸ ಪ್ರಜಾಪ್ರಭುತ್ವದ ಕೋಯೂಗಿದೆ ಆಟಾನಮಸ್ ನ್ ಸ್ಟಿಟ್ಯೂಷನ್‌ಗೆ ಹೆಚ್ಚು ಅಧಿಕಾರ ಇರಬೇಕು. ಅದು ಇಲ್ಲದಿದ್ದರೆ ಏನುಪ್ರಯೋಜನ ಎಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. I want to make a distinction between the local self Government institutions like the Taluk Boards, Village Panchayats Town Minicipalities Co-operative Societies and Companies, Corporations and the Boards of this Type ಇದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಸೊಸೈಟಿಗಳು ಏನಿವೆ ಇವು ಸಾರ್ವಜನಿಕರು ನಡೆಸಿಕೊಂಡು ಹೋಗತಕ್ಕಂಥ ಸಂಸ್ಥೆಗಳು. ಅಲ್ಲಿ ಸರ್ಕಾರ ಹೆಚ್ಚು ಕೈಹಾಕುವುದು ಸರಿಯಲ್ಲ ಮ್ಯಾನೇಜ್‌ಮೆಂಟಿನವರು ಕಾನೂನು ಬಾಹಿರವಾಗಿ ನಡೆದುಕೊಂಡರೆ ಆಗ ಸರ್ಕಾರದವರು ಕೈಹಾಕುವುದು ಸರಿ. ತಾಲ್ಲೂಕು ಬೋರ್ಡುಗಳು ಪಂಚಾಯಿತಿಗಳು ಲೋಕಲ್‌ಸೆಲ್ಫ್ ಗೌರ್ನಮೆಂಟಿನಲ್ಲಿ ಕೂಡ ಸ್ವಾಯತ್ತದೆಯಿಂದ ನಡೆಸಿಕೊಂಡು ಹೋಗುವುದಕ್ಕೆ ಅನುಕೂಲವಾಗುವಂತೆ ಹೆಚ್ಚು ಅಧಿಕಾರಗಳನ್ನು ಕೊಡಬೇಕಾಗುತ್ತದೆ. ಶ್ರೀಮಾನ್ ಪುಟ್ಟಸ್ವಾಮಿಯವರು ಮಂತ್ರಿಗಳಾಗಿದ್ದಾಗ ಮುನಿಸಿಪಾಲಿಟಿ ಆಕ್ಟನ್ನು ಜಾರಿಗೆ ತಂದಿದ್ದಾರೆ. ಅವರು ಒಂದು ರೀತಿಯಲ್ಲಿ ಹೆಚ್ಚು ಬದಲಾವಣೆಗಳನ್ನು ಮಾಡಿದ್ದಾರೆ ಅವರು ಇವೊತ್ತೂ ಕೂಡ ಈ ಮಸೂದೆಯ ಮೇಲೆ ಮಾತನಾಡುವಾಗ ಕೆಲವು ವಿಷಯಗಳನ್ನು ಸ್ಪಷ್ಟವಾಗಿ ಹೇಳಿದ್ದಾರೆ ಸರ್ಕಾರಕ್ಕೆ ಒಂದು ಅಧಿಕಾರ ಬೇಕಾಗುತ್ತದೆ ಯಾವ ದೃಷ್ಟಿಯಿಂದ ಅಧಿಕಾರ ಬೇಕಾಗುತ್ತದೆ. ಎಂಬುದನ್ನು ಅವರು ಹೇಳಿದ್ದಾರೆ. ಆದ್ದರಿಂದ ಇದಕ್ಕೆ

ಶ್ರೀ ಕೆ. ಎಚ್. ರಂಗನಾಥ್)

ಒಂದು ಕಂಪನಿ ಒಂದು ಕಾರ್ಪೊರೇಷನ್ ರೀತಿಯಲ್ಲಿ ಹೆಚ್ಚು ಅಧಿಕಾರವನ್ನು ಕೊಡಬೇಕೇ ಬೇಡವೇ ಎಂಬುದನ್ನು ಸರ್ಕಾರ ವಿಚಾರಮಾಡಬೇಕಾಗಿದೆ. ಇವೊತ್ತು ಇದಕ್ಕೆ ಸರ್ಕಾರ ಪೂರ್ಣವಾಗಿ ಹಣವನ್ನು ಕೊಡುತ್ತಿದೆ. ಡಿಬೆಂಚರ್ ವಗೈರೆ ಸರ್ಕಾರ ಬೇರೆ ಕಡೆಯಿಂದ ತೆಗೆದುಕೊಂಡು ಬರುತ್ತಾರೆ. ಸರ್ಕಾರ ಇದಕ್ಕೆ ಗ್ಯಾರಂಟಿ ನಿಲ್ಲುತ್ತದೆ. ಸರ್ಕಾರದ ಕಾರ್ಯಕ್ರಮ ಮಾಡುವುದಕ್ಕೋಸ್ಕರ ಈ ಸಭೆ ಒಂದು ಕಾನೂನನ್ನು ಮಾಡಿ ಕಾನೂನಿನ ಕೆಳಗಡೆ ಇದು ಅಸ್ತಿತ್ವಕ್ಕೆ ಬಂದಿದೆ. ಆ ದೃಷ್ಟಿಯಲ್ಲಿ ವಿಚಾರ ಮಾಡುವಾಗ ಲೋಕಲ್ ಸೆಲ್ಫ್ ಇನ್‌ಸ್ಟಿಟ್ಯೂಷನ್ಸ್ ಪಂಚಾಯಿತಿ ತಾಲ್ಲೂಕು ಬೋರ್ಡ್ ಟೌನ್ ಪಂಚಾಯಿತಿ ಈ ದೃಷ್ಟಿಯಲ್ಲಿ ನೋಡಬೇಕೇ ಎನ್ನುವುದನ್ನು ಮಾನ್ಯ ಸದಸ್ಯರು ಗಮನಕ್ಕೆ ತೆಗೆದುಕೊಳ್ಳಬೇಕು. ಶ್ರೀಮಾನ್ ಪುಟ್ಟಸ್ವಾಮಿಯವರು ಈ ಕಾರ್ಪೊರೇಷನ್ ಮತ್ತು ಬೋರ್ಡುಗಳು ಏನಿವೆ ಇದರ ಬಗ್ಗೆ ತೀವ್ರವಾಗಿ ವಿಚಾರ ಮಾಡಬೇಕಾಗಿದೆ ಎಂದು ಹೇಳಿದರು. ಈ ಬಗ್ಗೆ ನಾನು ನನ್ನ ವೈಯಕ್ತಿಕ ಅಭಿಪ್ರಾಯವನ್ನು ಕೊಡುವುದಕ್ಕೆ ಸಾಧ್ಯವಿಲ್ಲ ನಾನು ಮಂತ್ರಿಯಾಗಿರುವುದರಿಂದ ಸರ್ಕಾರದ ಪರವಾಗಿ ಮಾತನಾಡಬೇಕಾಗುತ್ತದೆ. ನನ್ನ ವೈಯಕ್ತಿಕ ಅಭಿಪ್ರಾಯವನ್ನು ಹೇಳುವುದಾದರೆ ನಾನು ಶ್ರೀಮಾನ್ ಪುಟ್ಟಸ್ವಾಮಿಯವರ ಅಭಿಪ್ರಾಯವನ್ನು ಅನುಮೋದನೆ ಮಾಡುತ್ತೇನೆ. ಏತಕ್ಕೆಂದರೆ ಇವೊತ್ತು ಎಲೆಕ್ಟ್ರಿಸಿಟಿ ಬೋರ್ಡ್ ತೆಗೆದುಕೊಳ್ಳಬಹುದು ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ತೆಗೆದು ಕೊಳ್ಳಬಹುದು. ಖಾದಿಬೋರ್ಡ್ ತೆಗೆದುಕೊಳ್ಳಬಹುದು. ಇದರ ಬಗ್ಗೆ ಮಾನ್ಯ ಸದಸ್ಯರು ಸರ್ಕಾರವನ್ನು ಟೀಕೆ ಮಾಡಿದ್ದಾರೆ. ಇದು ತಮ್ಮೆಲ್ಲಾ ಗೊತ್ತಿದೆ. ಖಾದಿ ಬೋರ್ಡಿನ ಪ್ರಕರಣದಲ್ಲಿ ಅಧ್ಯಕ್ಷರು ನಾಯಿಯನ್ನು ಕೊಂಡು ಲೆಕ್ಕವನ್ನು ಕೊಟ್ಟಿದ್ದನ್ನು, ಪ್ರಸ್ತಾಪ ಮಾಡಲಾಗಿದೆ. ಒಂದು ಪ್ರೈವೇಟ್ ಕಾರ್ಪೊರೇಷನ್ ಒಂದು ಪ್ರೈವೇಟ್ ಕಂಪನಿ ಇವುಗಳಿಗೆ ಎಷ್ಟು ಅಧಿಕಾರವನ್ನು ಕೊಡಬೇಕು ಎನ್ನುವ ದೃಷ್ಟಿಯಿಂದ ವಿಚಾರ ಮಾಡುವುದಾದರೆ ನನ್ನ ಅಭಿಪ್ರಾಯ ಸರಕಾರಕ್ಕೆ ಹೆಚ್ಚು ಅಧಿಕಾರ ಬೇಕು. ಶ್ರೀಮಾನ್ ಕೆ. ಪುಟ್ಟಸ್ವಾಮಿಯವರೂ ಇದೇ ಅಭಿಪ್ರಾಯಪಟ್ಟಿದ್ದಾರೆ. ಈ ಸಂಸ್ಥೆಗಳು ಈ ಮನೆಗೆ ಅಧೀನರಾಗಿ ಈ ಮನೆಯ ಆದೇಶಗಳನ್ನು ಕಾರ್ಯಗತ ಮಾಡುವ ರೀತಿಯಲ್ಲಿ ಈ ಸಂಸ್ಥೆಗಳು ಕೆಲಸ ಮಾಡಬೇಕು ಎಂದು ನನ್ನ ಅಭಿಪ್ರಾಯ. ಯಾವುದೇ ಸರ್ಕಾರ ಬಂದರೂ ಕೂಡ ಅದರ ಅಭಿಪ್ರಾಯದಂತೆ ಈ ಸಂಸ್ಥೆಯ ಕೆಲಸಕಾರ್ಯಗಳು ನಡೆಯಬೇಕಾಗುತ್ತದೆ. ಏತಕ್ಕೆಂದರೆ ಸರ್ಕಾರದವರು ಅವರಲ್ಲಿ ಹತ್ತಾರು ಕೋಟಿ ರೂಪಾಯಿಗಳನ್ನು ಹಾಕಿದ್ದಾರೆ. ನಾವು ಯಾವುದೇ ವ್ಯಕ್ತಿಯನ್ನು ಗಮನದಲ್ಲಿಟ್ಟುಕೊಂಡು ಈ ಕಾನೂನು ತಂದಿಲ್ಲ. ಶ್ರೀಮಾನ್ ದೇವೇಗೌಡರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಹಿಂದೆ ಇದ್ದ ಹೌಸಿಂಗ್ ಬೋರ್ಡ್ ಚೇರ್ಮನ್ ಅವರನ್ನು ಅಧಿಕಾರದಿಂದ ತೆಗೆದದ್ದು ಸರಿಯೇ ಎಂದು ಹೇಳಿದ್ದಾರೆ. ಇದರಲ್ಲಿ ವಾಸ್ತವಾಂಶಗಳ ಬಗ್ಗೆ ನಾನು ಉತ್ತರ ಕೊಡುವುದಕ್ಕೆ ಬಯಸುವುದಿಲ್ಲ. ಇದನ್ನು ಎನ್‌ಕ್ವೈರಿ ಮಾಡಿ ಎಂದು ಹೇಳಿದ್ದಾರೆ. ಇದನ್ನು ವಿಚಾರ ಮಾಡೋಣ. ಈ ಬಗ್ಗೆ ಹಿಂದೆ ಇದ್ದ ಮಂತ್ರಿಗಳು ಒಂದು ಕೆಲಸವನ್ನು ಮಾಡಿದ್ದಾರೆ. ಒಂದು ದೊಡ್ಡ ರಿಪೋರ್ಟನ್ನು ತರಿಸಿಕೊಂಡಿದ್ದಾರೆ. ಅದು ಇನ್‌ಸ್ಪೆಕ್ಷನ್ ರಿಪೋರ್ಟ್ ಆಫ್ ದಿ ಹೌಸಿಂಗ್ ಬೋರ್ಡ್ ಎಂದು ಜಿ. ಎ. ಡಿ. ಯಲ್ಲಿರುವ ಇ ಆರ್. ಬಿ ಭಾಗದಲ್ಲಿ ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಹತ್ತಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮುಂದೆ ಯಾವಾಗಲಾದರೂ ಅವಕಾಶ ಬಂದಾಗ ಅದನ್ನು ಸಭೆಯ ಗಮನಕ್ಕೆ ತರುತ್ತೇನೆ. ಇದರಲ್ಲಿ ಎಲ್ಲ ಸರಿ ಇದೆ ಎಂದು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇವೊತ್ತು ಈ ತಿದ್ದುಪಡಿ ಕಾನೂನಿನಲ್ಲಿ ಏನು ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದೇವೆ ಎಂದರೆ ಬೋರ್ಡ್ ಮತ್ತು ಚೇರ್ಮನ್ ಅವರಿಗೆ ಇದ್ದ ಕೆಲವು ಅಧಿಕಾರಗಳನ್ನು ಕಮಿಷನರಿಗೆ ಕೊಟ್ಟಿದ್ದೇವೆ. ಬೋರ್ಡ್‌ಪತ್ರ ಮುಖ್ಯವಾಗಿ ಕೆಲಸಮಾಡತಕ್ಕ ಕಾರ್ಯಕ್ಷೇತ್ರವನ್ನು ಚಾಪ್ಟರ್ ೩ ಮತ್ತು ಚಾಪ್ಟರ್ ೮ರಲ್ಲಿ ನಿಗದಿಮಾಡಲಾಗಿದೆ. ಚಾಪ್ಟರ್ ೩ ಸೆಕ್ಷನ್ ೧೭ರಿಂದ ಸೆಕ್ಷನ್ ೩೮ರ ವರೆಗೂ ಕೂಡ ಇದನು ಹೇಳಿದೆ. ಯಾವ ಅಧಿಕಾರವನ್ನೂ ಸರ್ಕಾರ ತೆಗೆದುಕೊಂಡಿಲ್ಲ. ಇದನ್ನು ೧೭ನೇ ಸೆಕ್ಷನಲ್ಲಿ ಸ್ಪಷ್ಟವಾಗಿ ಹೇಳಿದೆ. ಬೋರ್ಡ್ ಆಕ್ಟಿನಲ್ಲಿ ಅದರ ಉದ್ದೇಶ ಏನು ಬೋರ್ಡ್ ಏತಕ್ಕೆ ಅಸ್ತಿತ್ವದಲ್ಲಿ ಬಂದಿದೆ ಎಂಬುದನು ಕೂಡ ೧೭ನೇ ಸೆಕ್ಷನಲ್ಲಿ ಸ್ಪಷ್ಟವಾಗಿ ಹೇಳಿದೆ. ಅದು ಈ ರೀತಿಯಾಗಿದೆ "17th Duty of Board to undertake housing schemes subject to the provisions of this Act and subject to the control of the State Government the Board may incur expenditure and undertake works in any area for the framing and execution of such housing schemes as it may consider necessary from time to time or as may be entrusted to it by the State Government.

ಎಂಬುದಾಗಿದೆ, ಆದರೆ ಬೋರ್ಡಿನ ಛೇರ್ಮೆನ್ನರು ಅವರ ಅಧಿಕಾರ ಅವರ ಕಾರ್ಯವ್ಯಾಪ್ತಿ ಸರ್ಕಾರದವರು ಈ ಕಾನೂನಸಲ್ಲಿ ಸೆಕ್ಷನ್ ೧. ಮತ್ತು ೧೮ರಲ್ಲಿ ನಿಗದಿ ಮಾಡಿರುವುದಕ್ಕೆ ಅನುಗುಣವಾಗಿರಬೇಕಾಗಿದೆ. ಆದರೆ ಅವರಿಗೆ ಆ ಚೆಕ್ಕನ್ನು ಕೊಡತಕ್ಕ ಅಧಿಕಾರಿ ಇರುವುದಿಲ್ಲ ಅದರಿಂದ ಅವರಿಗೆ ಏನೂ ಅಧಿಕಾರವಿಲ್ಲ ಎಂದು ಹೇಳುವುದು ಸರಿಯಲ್ಲ ನಾನು ಅದನ್ನು ಒಪ್ಪುವುದಿಲ್ಲ. ಬೋರ್ಡಿನ ಛೇರ್ಮೆನ್ನರಿಗೆ ಸೆಕ್ಷನ್ (೧೮) ರಲ್ಲಿ ಹೇಳಿರುವುದನ್ನು ಗಮನಿಸಿದರೆ ಅವರಿಗೂ ಕೂಡ ಇಲ್ಲಿ ಹೆಚ್ಚಿನ ಅಧಿಕಾರವನ್ನು ಕೊಟ್ಟಿದೆ ಅವರ ವ್ಯಾಪ್ತಿಯಲ್ಲೂ ಅನೇಕ ಕೆಲಸಗಳು ಬರುತ್ತವೆ. ಆದರೆ ಸರ್ಕಾರದವರು ಏನು ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತಾರೋ ಅದಕ್ಕನುಗುಣವಾಗಿ ಈ ಬೋರ್ಡಿನ ಚಟುವಟಿಕೆಗಳು ನಡೆಯಬೇಕಾಗಿವೆ ಅದಕ್ಕಾಗಿ ಆ ಬೋರ್ಡಿನ ಅಡ್ಮಿನಿಸ್ಟ್ರೇಟೀವ್ ಪವರನ್ನು ಮಾತ್ರ ಛೇರ್ಮೆನ್ನರಿಂದ ತೆಗೆದು ಕಮೀಷನರಿಗೆ ಕೊಡಲಾಗಿದೆ. ಅಷ್ಟರಿಂದಲೇಬೋರ್ಡಿನ ಛೇರ್ಮನರಿಗೆ ಇದ್ದ ಅಧಿಕಾರವೆಲ್ಲಾ ಹೋಯಿತು ಎಂದು ಹೇಳುವುದು ಸರಿಯಲ್ಲ.

ಇನ್ನು ಸೆಕ್ಷನ್ (೨೦) (ಎ)ನಲ್ಲಿ ಕೆಲವು ಬದಲಾವಣೆಗಳನ್ನು ಮಾಡಲಾಗಿದೆ. ಆ ಬದಲಾವಣೆ ಏನೆಂದರೆ ಕೆಲಸಕ್ಕೆ ಜನರನ್ನು ನೇಮಕ ಮಾಡಿಕೊಳ್ಳತಕ್ಕ ಕಾಲದಲ್ಲಿ ನಿಮ್ನ ವರ್ಗದವರಿಗೆ ಸರಿಯಾದ ಪ್ರಾತಿನಿಧ್ಯ ಒದಗಿಸುವದಕ್ಕೆ ಇದರಲ್ಲಿ ಅವಕಾಶ ಮಾಡಿದೆ ಇನ್ನು ಮೂಲ (೨೦)ನೇ ಸೆಕ್ಷನ್ನಿನಲ್ಲಿ ಯಾವ ಬದಲಾವಣೆಯನ್ನೂ ಮಾಡಿಲ್ಲ. ಆದರೆ ಇಲ್ಲಿ ಆಗಿರತಕ್ಕ ಕೆಲವು ಬದಲಾವಣೆಗಳೇನಿವೆ ಅವು ಕೇವಲ ಕಾನ್ಸಿಕ್ವೆನ್ಸಿಯಲ್ ಆದರೆ ಒಟ್ಟಿನಲ್ಲಿ ಇಲ್ಲಿ ಸರ್ಕಾರದವರು ತಮ್ಮ ಪಾಲಿಸಿ ಪ್ರೋಗ್ರಾಂಮನುಕಾರ್ಯಗತಮಾಡಲು ಒಬ್ಬ ಹೌಸಿಂಗ್ ಕಮೀಷನರನ್ನೂ ಒಬ್ಬ ಚೀಫ್ ಇಂಜಿನಿಯರನ್ನು ಮತ್ತು ಒಬ್ಬ ಸೆಕ್ರೆಟರಿ ಹೀಗೆ ಮೂವರನ್ನು ಅಲ್ಲಿ ಸದಸ್ಯರನಾಗಿ ಮಾಡಿಕೊಂಡಿದ್ದಾರೆ ಆದಾಗ್ಯೂ ಅಲ್ಲಿ 'ಅಥಾರಿಟಿ' ಎಂದರೆ ಬೋರ್ಡ್ ಎಂತಲೇ ಅರ್ಥ ಮಾಡಬೇಕು. ಇನ್ನು ಸೆಕ್ಷನ್ (೨೫)ರಲ್ಲಿ ಬೋರ್ಡಿನ ಛೇರ್ಮೆನ್ನರ ಅಧಿಕಾರ ಮತ್ತು ಕಾರ್ಯವ್ಯಾಪ್ತಿಗಳೇನೆಂಬುದನ್ನು ವಿವರಿಸಿರುತ್ತೆ. ಮಾನ್ಯ ಕೆ. ಪುಟ್ಟಸಾಮಿಯವರು ಅನೇಕ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ ಸರ್ಕಾರಕ್ಕೆ ಈ ಬೋರ್ಡಿನ ಯಾವ ವಿಚಾರ ಬೇಕಾದರೂ ಅದನ್ನು ಕಮೀಷನರಿಂದ ತರಿಸಿಕೊಳ್ಳುವುದಕ್ಕೆ ಅವಕಾಶವಿದೆ ನಾನಾಗಲೆ ಹೇಳಿದಂತೆ ಇವುಗಳೆಲ್ಲಾ ರಾಜಕೀಯ ನೇಮಕಗಳು. ಕಾರಣ ಇಲ್ಲಿ ಸರ್ಕಾರದವರು ಕೊಡತಕ್ಕ ಆಜ್ಞೆಗಳನ್ನು ಸಕಾಲಕ್ಕೆ ಜಾರಿ ಮಾಡಬೇಕಾಗಿರುತ್ತದೆ ಅಷ್ಟೇವಿನಃ ಇಲ್ಲಿ ಯಾವ ವ್ಯಕ್ತಿಯನ್ನೂ ನಾವು ಗಮನದಟ್ಟುಕೊಂಡು ಈ ಬದಲಾವಣೆಗಳನ್ನು ತಂದಿಲ್ಲ. ಆದುದರಿಂದ ಎಲ್ಲಾ ಮಾನ್ಯ ಸದಸ್ಯರೂ ಈ ತಿದ್ದುಪಡಿ ಮಂಜೂರಿಗೆ ತಮ್ಮ ಅನುಮತಿ ಸೂಚಿಸಬೇಕೆಂದು ಹೇಳುತ್ತೇನೆ.

MADAM SPEAKER.— The question is :

"That the Karnataka Housing Board (Amendment) Bill 1974 be taken into consideration"

The motion was adopted

CLAUSE 2

MADAM SPEAKER.—The question is

"That Clause 2 do stand part of the Bill"

The motion was adopted

Clause 2 was added to the Bill

CLAUSE 3

SRI T. R. SHAMANNA.—(fort) I beg to move

"That the following proviso shall be added to sub-clause 1

Provided that out of the three additional members proposed, one shall be a retired Chief Engineer, one shall be a financial specialist and one representative of a local body a Mayor, President of a Major Municipality'

MADAM SPEAKER.—Amendment moved

"That the following provisio shall be added to sub-clause 1

Provided that out of the three additional members proposed one shall be a retired Chief Engineer, one shall be financial specialist and one representative of a local body a Mayor, President of a Major Municipality"

† ಟಿ ಆರ್ ಶಾಮಣ್ಣ.—ಈಗತಾನೆ ಮಾನ್ಯಮಂತ್ರಿಗಳು ಈ ತಿದ್ದುಪಡಿ ಮಸೂದೆಯ ಉದ್ದೇಶವೇನೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಏನೆಂದರೆ ಆಡಳಿತ ಪಕ್ಷದಲ್ಲಿರತಕ್ಕ ಜನರಿಗೆ ಅನುಕೂಲ ಮಾಡುವುದಕ್ಕಾಗಿ ಈ ಜಾಗವನ್ನು ಕ್ರಿಯೇಟ್ ಮಾಡಿಕೊಳ್ಳಲಾಗಿದೆ ಆದ್ದರಿಂದ ಇವುಗಳೆಲ್ಲವೂ ಪೊಲಿಟಿಕಲ್ ಆಫೀಸುಗಳು ಪೊಲಿಟಿಕಲ್ ಪಾರ್ಟಿಯ ಅನುಕೂಲಕ್ಕಾಗಿ ಇರತಕ್ಕವು ಎಂಬುದನ್ನು ಸ್ಪಷ್ಟವಾಗಿ ಹೇಳಿಬಿಟ್ಟಿದ್ದಾರೆ, ಅದರಿಂದ ನನ್ನ ಶ್ರಮ ಬಹಳ ಮಟ್ಟಿಗೆ ಕಡಿಮೆ ಆಯಿತು. ಇದೇ ರೀತಿಯಲ್ಲಿ ಆಡಳಿತ ನಡೆಸುತ್ತಿರುವ ಪಕ್ಷ ತನ್ನ ಪಕ್ಷದ ಜನರಿಗೆ ಹುದ್ದೆಗಳನ್ನು ಕೊಡುವುದಕ್ಕಾಗಿ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್. ಅದಕ್ಕೆ ಒಬ್ಬರು ಚೇರ್ಮನ್, ಟ್ರಸ್ಟ್ ಬೋರ್ಡ್ ಇದಕ್ಕೊಬ್ಬರು ಇವರ ಪಕ್ಷದವರು ಛೇರ್ಮನ ಖಾದಿ ಬೋರ್ಡ್ ಅದಕ್ಕೆ ಒಬ್ಬರು ಇವರ ಛೇರ್ಮನ್ ಹೀಗೆ ಇವರು ಇವರಿಗೆ ಇಷ್ಟಬಂದಹಾಗೆ ಬೋರ್ಡುಗಳನ್ನು ಮತ್ತು ಕಾರ್ಪೋರೇಷನ್ನುಗಳನ್ನು ಮಾಡಿಕೊಳ್ಳುವುಕ್ಕೆ ಅವಕಾಶ ಮಾಡಿಕೊಂಡಿದ್ದಾರೆ ಈ ಎಲ್ಲಕ್ಕೂ ಇವರ ಪಕ್ಷದವರನ್ನೇ ಛೇರ್ಮನ್ನರನ್ನಾಗಿ ನೇಮಕ ಮಾಡಿಕೊಂಡಿದ್ದಾರೆ ಆದರೆ ಅದಕೂ ಕೂಡ ನಾನು ಬೇಡವೆನ್ನುವುದಿಲ್ಲ. ಆದರೆ ಇಲ್ಲಿ ಮಾನ್ಯ ಮಂತ್ರಿಗಳು ಹಿಂದೆ ೧೨ ಇದ್ದ ಸದಸ್ಯರ ಸಂಖ್ಯೆಯನ್ನು ಏಕೆ ೧೫ಕ್ಕೆ ಏರಿಸಲಾಯಿತು ಎಂಬುದನ್ನು ಸರಿಯಾಗಿ ವಿವರಣೆ ಮಾಡುವುದಕ್ಕೆ ಅವರಿಂದ ಸಾಧ್ಯವಾಗಲಿಲ್ಲ ಆಡಳಿತಪಕ್ಷದವರು ತಮ್ಮ ಪಾರ್ಟಿಯಲ್ಲಿ ಅತೃಪ್ತಿಯಿಂದ ಹಲ್ಲನ್ನು ಮಸೆಯುತ್ತಿರುವವರಿಗೆ ಇಂಥ ಸ್ಥಾನಗಳನ್ನು ಕಲ್ಪಿಸುತ್ತಿರುವುದು ಅದರಲ್ಲೂ ಸಾರ್ವಜನಿಕರ ಹಣವನ್ನು ಖರ್ಚುಮಾಡತಕ್ಕ ಜಾಗದಲ್ಲಿ ಹೀಗೆ ಮಾಡುವುದು ಸರಿಯಲ್ಲ ಇವರು ಕೆಲವು ಕಾರ್ಪೊರೇಟರುಗಳನ್ನು ಟ್ರಸ್ಟ್‌ಬೋರ್ಡಿಗೆ ನಾಮಿನೇಟ್ ಮಾಡಿದ ನಂತರ ಅವರು ಲಕ್ಷಾಧಿಕಾರಿಗಳಾಗಿದ್ದಾರೆ. ಮೊದಲು ಅವರು ಕೇಲಾಫ್ ಫುಟ್‌ಪಾತಿನಲ್ಲಿದ್ದವರು.

SRI K. H. RANGANATH — I rise to a point of Order. The hon. member is dragging the Corporation members here.

MADAM SPEAKER —That is not necessary

ಶ್ರೀ ಟಿ. ಆರ್. ಶಾಮಣ್ಣ —ಕಾರ್ಪೊರೇಟರಾಗಿದ್ದವರು ಟ್ರಸ್ಟ್‌ಬೋರ್ಡಿನ ಸದಸ್ಯರಾದ ಮೇಲೆ ಬೇಕಾದಷ್ಟು ಆಸ್ತಿಗಳನ್ನು ಮಾಡಿಕೊಂಡಿದ್ದಾರೆ. ಅದೆಲ್ಲಾ ಎಲ್ಲಿಂದ ಬಂತು ? ಇದು ಸಾರ್ವಜನಿಕರ ಹಿತದೃಷ್ಟಿಯಿಂದ ಕೆಲಸ ಮಾಡತಕ್ಕ ರೀತಿನೀತಿಯೇ ಎಂದು ಕೇಳುತ್ತೇನೆ. ಜನರ ಹಿತದೃಷ್ಟಿಯನ್ನು ಗಮನದಲ್ಲಿಟ್ಟು ಕೆಲಸ ಮಾಡತಕ್ಕ ಜನರನ್ನು ಹಾಕಿ, ಅದರ ಬಗ್ಗೆ ನನ್ನ ವಿರೋಧವಿಲ್ಲ ಆದರೆ ಈ ತಿದ್ದುಪಡಿ ತಂದಿರುವ ಉದ್ದೇಶವಿಷ್ಟೆ. ೧೨ ಸದಸ್ಯರಿರುವುದನ್ನು ೧೫ಕ್ಕೆ ಹೆಚ್ಚಿಸುವುದಕ್ಕೆ ಸರಿಯಾದ ಕಾರಣ ಕೊಟ್ಟಿಲ್ಲ. ನಿಮ್ಮ ಪಕ್ಷದವರಿಗೆ ನೀವು ಅಧಿಕಾರ ಕೊಟ್ಟರೂ ಖರ್ಚಾಗುವುದು ಸಾರ್ವಜನಿಕ ಹಣ. ಆದುದರಿಂದ ಆ ಹಣ ಜನರ ಹಿತದೃಷ್ಟಿಯಿಂದ ಮತ್ತು ಬಡವರಿಗೆ ಅನುಕೂಲ ಮಾಡುವುದಕ್ಕೆ ಖರ್ಚಾಗಬೇಕು, ಖರ್ಚು ಮಾಡುವುದಕ್ಕೆ ಅಡ್ಡಿ ಮಾಡುವುದಿಲ್ಲ. ೧೨ ಜನರನ್ನು ಬೇಕಾದರೆ ಆಡಳಿತ ಪಕ್ಷದವರನ್ನೇ ಆರಿಸಿ ಆದರೆ ಆಡಳಿತ ಸ್ವಚ್ಛವಾಗಿದ್ದು ಜನರಿಗೆ ಅನುಕೂಲವಾಗುವುದಕ್ಕೆ ನನ್ನ ತಿದ್ದುಪಡಿಯಲ್ಲಿರುವಂತೆ ಒಬ್ಬ ರಿಟೈರ್ಡ್ ಚೀಫ್ ಎಂಜಿನಿಯರು, ಒಬ್ಬ ಫೈನಾನ್ಸಿಯಲ್ ಸ್ಪೆಷಲಿಸ್ಟ್ ಮತ್ತು ಲೋಕಲ್ ಬಾಡಿಯ ಒಬ್ಬ ರೆಪ್ರೆಸೆಂಟೇಟಿವ್ ಇಟ್ಟುಕೊಳ್ಳಿ. ಏಕೆಂದರೆ ಬೇಕಾದಷ್ಟು ಕೆಲಸಮಾಡುವಾಗ ಒಬ್ಬ ಪರಿಣತರಿರುವುದು ಅವಶ್ಯಕ, ಅದಕ್ಕೆ ಚೀಫ್ ಎಂಜಿನಿಯರಿರಬೇಕು. ಎರಡನೆಯದಾಗಿ ಕೋಟಿಗಟ್ಟಲೆ ಖರ್ಚಾಗುವುದರಿಂದ ಹಣಕಾಸಿನ ಮಾಹಿತಿಯಿರುವ ಒಬ್ಬ ಪರಿಣತರಿರಬೇಕಾದ್ದು ಅವಶ್ಯಕ. ಅಲ್ಲದೆ ಅನೇಕ ಸಂದರ್ಭಗಳಲ್ಲಿ ಲೋಕಲ್ ಬಾಡೀಸ್‌ಗೆ ಸಂಬಂಧಪಟ್ಟಿರುವ ವಿಚಾರಗಳು, ಆಕ್ವಿಜೇಷನ್ ಮುಂತಾದ್ದು ಬರುವುದರಿಂದ ಮತ್ತು ಲೋಕಲ್ ಬಾಡೀಸ್‌ಗೂ ಹೌಸಿಂಗ್ ಬೋರ್ಡಿಗೂ ಕ್ಲಾಷ್ ಬಾರದ ಹಾಗೆ ನೋಡಿಕೊಳ್ಳುವುಕ್ಕೆ ಲೋಕಲ್‌ಬಾಡೀಸ್ ಪ್ರತಿನಿಧಿ ಇರಬೇಕು ಎಂದು ನಾನು ತಿದ್ದುಪಡಿ ತಂದಿದ್ದೇನೆ, ೧೨ ಜನರನ್ನು ಸರಕಾರಿ ಪಕ್ಷದಿಂದ ಹಾಕಲು ಅವಕಾಶವಿದೆ. ಇದರ ಜೊತೆಗೆ ೩ ಜನರನ್ನು ಹಾಕಲು ಮಂತ್ರಿಗಳು ಸಕಾರಣ ಕೊಟ್ಟಿಲ್ಲ. ಆದುದರಿಂದ ನನ್ನ ತಿದ್ದು

ಪಡಿಯಲ್ಲಿ ನಮೂದಿಸಿರುವಂತೆ ೩ ಜನ ಪರಿಣತರನ್ನು ತೆಗೆದುಕೊಳ್ಳುವುದು ಅವಶ್ಯಕವಾಗಿದೆ. ಈ ತಿದ್ದುಪಡಿಯನ್ನು ನನಗೆ ಅಧಿಕಾರ ಕೊಡಿ ಎಂದು ತಂದಿಲ್ಲ, ಪರಿಣತರಿರುವುದು ಒಳ್ಳೆಯದು ಎಂಬ ಉದ್ದೇಶದಿಂದ ತಂದಿರುವುದರಿಂದ ಇದನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.— ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಮಾನ್ಯ ಸದಸ್ಯರೇನು ಅಭಿಪ್ರಾಯ ತಿಳಿಸಿದ್ದಾರೆ ಅದನ್ನು ಕಾರ್ಯಗತ ಮಾಡಲು ಈಗಾಗಲೆ ಸರಕಾರದವರು ಅವಕಾಶ ಮಾಡಿದ್ದಾರೆ. ಸರಕಾರದ ವತಿಯಿಂದ ಸುಮಾರು ೫-೬ ಜನ ಎಂಜಿನಿಯರಿರುವರು, ಅವರು ಪರಿಣತರು ಎಂದು ಮಾನ್ಯ ಸದಸ್ಯರೇ ಹೇಳಿದ್ದಾರೆ ಆದುದರಿಂದ ಮಾನ್ಯ ಸದಸ್ಯರೇನು ಉದ್ದೇಶ ವ್ಯಕ್ತಮಾಡಿದ್ದಾರೆ ಅದು ಈಡೇರಲು ಈಗ ಅವಕಾಶವಿದೆ. ಆದುದರಿಂದ ಮತ್ತೆ ನಮೂದುಮಾಡುವುದು ಸರಿಯಲ್ಲ. ಈ ದೃಷ್ಟಿಯಿಂದ ಮಾನ್ಯ ಸದಸ್ಯರ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ.

MADAM SPEAKER.—The question is That the following proviso shall be added to Sub-clause-1

Provided that out of the three additional members proposed, one shall be a retired Chief Engineer, one shall be a financial specialist and one representative of a local body a Mayor, President of a Major Municipality.

The amendment was negatived

MADAM SPEAKER.—The question is

"That clause 3, do stand part of the Bill

The motion was adopted

Clause 3 was added to the Bill

Clause 4

SRI T. R. SHAMANNA.— I beg to move

"That sub-section 1 of the proposed Section 6 shall be deleted"

MADAM SPEAKER —Amendment moved.

"That sub-section of the proposed Section 6 shall be deleted'

SRI T. R. SHAMANNA—The term of office and conditions of of service.

(1) The Chairman and every other member shall hold office during the pleasure of the State Government

ಈ ಸಬ್‌ಸೆಕ್ಷನ್ (೧)ನ್ನು ತೆಗೆದು ಹಾಕಬೇಕು ಎಂದು ನಾನು ಹೇಳುತ್ತೇನೆ

ಈ ತಿದ್ದುಪಡಿಯ ಉದ್ದೇಶವಿಷ್ಟೆ. ಸಾಧಾರಣವಾಗಿ ಇಂಥ ಹುದ್ದೆಯನ್ನು ಮಾನ, ಮರ್ಯಾದೆ, ಗೌರವ ಇರುವ ಯಾರೂ ಒಪ್ಪಿಕೊಳ್ಳುವುದಿಲ್ಲ. ಆದರೆ ಆಡಳಿತ ಪಕ್ಷದವರು ಸ್ವಾರ್ಥಕ್ಕಾಗಿ ಒಪ್ಪಿಕೊಳ್ಳುವರು. ನಿಜವಾಗಿಯೂ ಸೇವೆ ಮಾಡಬೇಕು ಮತ್ತು ಮರ್ಯಾದೆಯಿಂದ ಸಂಸ್ಥೆಯಲ್ಲಿರಬೇಕು ಎನ್ನುವವರು ಇದಕ್ಕೆ ಬರುವುದಿಲ್ಲ. ಡ್ಯೂರಿಂಗ್ ದಿ ಪ್ಲೆಷರ್ ಆಫ್ ದಿ ಗವರ್ನಮೆಂಟ್ ಎಂದಿರುವುದರಿಂದ ಹೇಳಿದಂತೆ ಕೇಳದಿದ್ದರೆ ಮನೆಗೆ ಹೋಗಬೇಕಾಗುವುದು, ಹಾಗೆ ಕಳಿಸಲು ಅಧಿಕಾರವಿದೆ. ಆದುದರಿಂದ

(ಶ್ರೀ ಟಿ. ಆರ್. ಶಾಮಣ್ಣ)

ಇದು ಸರಿಯಲ್ಲ. ಮಾತೆತ್ತಿದರೆ ಕೇಂದ್ರ ಸರಕಾರದ ಮಂತ್ರಿಗಳು ಪ್ರಜಾಪ್ರಭುತ್ವ ಉದ್ಧಾರವಾಡುವುದು ನಮ್ಮ ಪಕ್ಷ ಎಂದು ಹೇಳುವರು. ಸಾಧಾರಣವಾಗಿ ೩ ವರ್ಷದ ಅವಧಿ ಇದ್ದರೂ ಕೂಡ ಡ್ಯೂರಿಂಗ್ ದಿ ಪ್ಲೆಷರ್ ಆಫ್ ಗವರ್ನಮೆಂಟ್ ಎಂದಿರುವುದರಿಂದ ತೊಂದರೆಯಾಗಲು ಅವಕಾಶವಿದೆ, ಇದು ಗೌರವಯುತವಾದುದಲ್ಲ, ನ್ಯಾಯವಾದುದಲ್ಲ ಮತ್ತು ಒಳ್ಳೆಯದಲ್ಲ. ಒಂದು ಕಡೆ ಚಿನ್ನದ ಕತ್ತಿ ಹಿಡಿದುಕೊಂಡು ಮತ್ತೊಂದು ಕಡೆ ಸದಸ್ಯರಾಗಿರಿ ಎಂದು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಇದರ ಬಗ್ಗೆ ಆಡಳಿತ ಪಕ್ಷದ ಸದಸ್ಯರಾದ ಶ್ರೀ ಕೆ. ಪುಟ್ಟಸ್ವಾಮಿಯವರು ಕೂಡ ಹೇಳಿದ್ದಾರೆ, ಶ್ರೀ ರಂಗನಾಥ್‌ರವರಿಗೂ ಕೂಡ ಇದು ಗೊತ್ತಿದೆ. ಆದರೆ ಅವರು ಪಕ್ಷದ ದೃಷ್ಟಿಯಿಂದ ಒಪ್ಪಿಕೊಳ್ಳಬೇಕಾಗಿದೆ. ಈಗ ತಿದ್ದುಪಡಿ ಮಾಡಿರುವುದು ಸರಿಯಲ್ಲ, ಯಾರಾದರೂ ಸದಸ್ಯರು ಅರ್ಹರಲ್ಲದಿದ್ದರೆ ಮುಂದೆ ತಪ್ಪು ಮಾಡಿದರೆ ಅದರಮೇಲೆ ಕ್ರಮ ತೆಗೆದುಕೊಳ್ಳಲು ಬೇಕಿ ಬೇಕಾದ ರೂಲ್ಸ್ ಮಾಡಿ ಕ್ರಮ ತೆಗೆದುಕೊಳ್ಳಿ. ೩ ವರ್ಷ ಇಡಿ ಎಂದು ಹೇಳುವುದಿಲ್ಲ. ಯಾರಾದರೂ ಕೊಲೆ ಮಾಡಿದರೆ ಶಿಕ್ಷೆಯಾದರೂ ಅಪೀಲು ಹೋಗುವುದಕ್ಕೆ ಮತ್ತು ರಾಷ್ಟ್ರಾಧ್ಯಕ್ಷರ ಕಡೆಯಿಂದ ಬಿಡುಗಡೆ ಹೊಂದುವುದಕ್ಕೆ ಅವಕಾಶವಿದೆ ಹಾಗಿಲ್ಲದೆ ಡ್ಯೂರಿಂಗ್ ದಿ ಪ್ಲೆಷರ್ ಆಫ್ ದಿ ಗವರ್ನಮೆಂಟ್ ಎಂದು ಹಾಕುವುದು ತಪ್ಪಾಗುವುದು. ಯಾರಾದರೂ ಅವಿವೇಕದಿಂದ ತನ್ನ ಅಧಿಕಾರವನ್ನು ದುರುಪಯೋಗ ಮಾಡಿಕೊಂಡರೆ ಅದಕ್ಕೆ ಕ್ರಮ ತೆಗೆದುಕೊಳ್ಳಲು ಅವಕಾಶ ಇಟ್ಟುಕೊಳ್ಳಬಹುದು. ಆದರೆ ಈ ರೀತಿ ಬ್ಲಾಂಕ್ ಚೆಕ್ ತೆಗೆದುಕೊಳ್ಳುವುದು ಪ್ರಜಾಪ್ರಭುತ್ವದಲ್ಲಿ ಸಾಧುವಾದುದಲ್ಲ. ಆದುದರಿಂದ ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದು ಒತ್ತಾಯಮಾಡಿ ನನ್ನ ತಿದ್ದುಪಡಿ ಒಪ್ಪಿಕೊಳ್ಳಬೇಕೆಂದು ಸೂಚಿಸುತ್ತೇನೆ.

ಶ್ರೀ ಕೆ ಎಚ್. ರಂಗನಾಥ್.— ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರು ಇದನ್ನು ಹಿಂದಕ್ಕೆ ತೆಗೆದುಕೊಂಡರೆ ಒಳ್ಳೆಯದು, ಅವರು ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ,

MADAM SPEAKER.—The question is:

"That sub-section I of the proposed Section 6 shall be deleted."

The amendment weas negatived

MADAM SPEAKER.—The question is:

"That clause 4 do stand part of the Bill"

The motion was adopted.

Clause 4 was added to the Bill.

CLAUSES 5 and 6

MADAM SPEAKER.—As there are no amendments to clauses 5 and 6, I shall put them to the vote of the House.

The question is:

"That clauses 5 and 6 do stand part of the Bill."

The motion was adopted

Clauses 5 and 6 were added to the Bill.

CLAUSE 7

SRI T. R. SHAMANNA.—I beg to move:

"That the following proviso shall be added to the sub-section of the proposed Section 10;

"Provided that the Government while appointing (i) Housing Commissioner (ii) Deputy Commissioner (iii) Chief Engineer and Secretary, shall send a panel of three names to the Housing Board and the Housing Board shall recommend the name of the required officer".

The following proviso shall be added to the sub section 7 of the proposed Section 10.

"Provided that the Commissiner shall place the report of the action taken by him before the Board at the earliest meeting of the Board."

MADAM SPEAKER. — Amendments moved:

That the following proviso shall be added to the sub-section 2 of the proposed Settion 10:

"Provided that the Government while appointing (i) Housing Commissioner (ii) Deputy Commissioner (iii) Chif Engineer and Secretary, shall send a panel of three names to the Housing Board and Housing Board shall recommend the name of the required officer."

The following proviso shall be added to the sub-section 7 of the proposed Section 10:

"Provided that the Commissioner shall place the report of the action taken by him before the Board at the earliest meeting of the Board."

† ಶ್ರೀ ಟಿ. ಆರ್. ಶಾಮಣ್ಣ: ಏಳನೇ ಕ್ಲಾಜಿಗೆ ತಂದಿರುವ ತಿದ್ದುಪಡಿಯಲ್ಲಿ ಎರಡು ಅಂಶಗಳನ್ನು ಬದಲಾವಣೆ ಮಾಡಬೇಕೆಂದು ಸೂಚಿಸಿದ್ದೇನೆ. ಮೊದಲನೆಯದು ಸರ್ಕಾರ ಈ ಬೋರ್ಡಿಗೆ ಹೌಸಿಂಗ್ ಕಮಿಷನರ್, ಡೆಪ್ಯುಟಿ ಕಮಿಷನರ್ ಚೀಫ್ ಇಂಜಿನಿಯರ್ ಮತ್ತು ಕಾರ್ಯದರ್ಶಿಯವರನ್ನು ನೇಮಿಸತಕ್ಕ ಅಧಿಕಾರವನ್ನು ಪೂರ್ಣವಾಗಿ ತೆಗೆದುಕೊಂಡಿದ್ದಾರೆ, ನನ್ನ ತಿದ್ದುಪಡಿಯಾದರೂ ಇಂಥ ಮಂಡಲಿಗಳಿಗೆ ಅಟಾನಮಸ್ ಪವರ್ ಕೊಡಬೇಕಾದರೆ, ಅಧಿಕಾರಿಗಳು ಮತ್ತು ಹೌಸಿಂಗ್ ಬೋರ್ಡ್ ಸದಸ್ಯರು ಹೊಂದಾಣಿಕೆಯಿಂದ ಕೆಲಸ ಮಾಡಬೇಕಾದರೆ ಹೌಸಿಂಗ್ ಬೋರ್ಡಿಗೂ ಮುಖ್ಯ ಅಧಿಕಾರಿಗಳನ್ನು ಚುನಾಯಿಸಿಕೊಳ್ಳುವುದರಲ್ಲಿ ಒಂದು ಪಾತ್ರವಿರಬೇಕು ಎನ್ನುವ ಉದ್ದೇಶದಿಂದ ತಂದಿರುವುದೇ ಆಗಿದೆ. ಈ ಅಧಿಕಾರಿಗಳನ್ನು ನೇಮಕಮಾಡುವ ಸಂದರ್ಭದಲ್ಲಿ ಸರ್ಕಾರ ಮೂರು ಜನರ ಒಂದು ಪ್ಯಾನಲ್ ಬೋರ್ಡಿಗೆ ಕಳುಹಿಸಿಕೊಟ್ಟು ಆದರಿಂದ ಒಬ್ಬರನ್ನು ಚುನಾಯಿಸತಕ್ಕ ಅವಕಾಶವನ್ನು ಬೋರ್ಡಿಗೆ ಕೊಡಬೇಕು.

ಎರಡನೆಯದಾಗಿ ಹೌಸಿಂಗ್ ಕಮಿಷನರ್, ಚೀಫ್ ಇಂಜಿನಿಯರ್, ಕಾರ್ಯದರ್ಶಿ ಇವರುಗಳು ಅನೇಕ ಕೆಲಸಗಳನ್ನು ಬೋರ್ಡಿನ ಅನುಮತಿ ಇಲದೆ ತಾವೇ ಮಾಡುವಂತೆ ಅಧಿಕಾರವನ್ನು ಕೊಡಲಾಗಿದೆ. ಇವರು ತೆಗೆದುಕೊಂಡಂಥ ಕಾರ್ಯಕ್ರಮಗಳ ಬಗ್ಗೆ ಹೌಸಿಂಗ್ ಬೋರ್ಡ್ ಮುಂದೆ ಇಟ್ಟು ಅದನ್ನು ರ್ಯಾಟಿಫೈ ಮಾಡಿಸಬೇಕು ಎನ್ನುವ ತಿದ್ದುಪಡಿಯನ್ನು ತಂದಿದ್ದೇನೆ. ಯಾವುದೇ ಬೋರ್ಡಿಗೆ ಮರ್ಯಾದೆ ಇರಬೇಕಾದರೆ ಅದರ ಅಧಿಕಾರಿಗಳು ಬೋರ್ಡಿನ ಅನುಮತಿ ಇಲ್ಲದೆ ತೆಗೆದುಕೊಳ್ಳುವ ಕಾರ್ಯಕ್ರಮ

(ಶ್ರೀ ಟಿ. ಆರ್ ಶಾಮಣ್ಣ)

ಗಳನ್ನು ಬೋರ್ಡಿನ ಮುಂದೆ ತಂದು ಅದನ್ನು ಕ್ರಮಪಡಿಸುವ ಅವಕಾಶವಾದರೂ ಇರಬೇಕು. ಬೋರ್ಡಿನ ಹಿತದೃಷ್ಟಿಯಿಂದ ಕೂಡ ಇಂಥ ಅವಕಾಶವಿರುವುದು ಒಳ್ಳೆಯದು ಎಂದು ತಿದ್ದುಪಡಿಯನ್ನು ಸೂಚಿಸಿದ್ದೇನೆ. ಅದನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಎಚ್ ರಂಗನಾಥ್—: ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ನಾನು ಈಗಾಗಲೇ ಪ್ರಸ್ತಾಪ ಮಾಡಿ ಹೇಳಿರುವಂಥ ಸರ್ಕಾರ ತನಗೆ ಬೇಕಾದ ಅಧಿಕಾರಿಗಳನ್ನು ಹಾಕಬಹುದು ಎನ್ನುವ ವಿಚಾರವಿರುವಾಗ ಮತ್ತೆ ಬೋರ್ಡಿನ ರ್‍ಯಾಟಿಫಿಕೇಷನ್ ಕೇಳುವುದು ಸರಿ ಹೋಗುವುದಿಲ್ಲ.

MADAM SPEAKER:—I will put the amendments to the vote of the House.

The question is:

That the following proviso shall be added to the Sub-section 2 of the proposed Section 10:

"Provided that the Government while appointing (i) Housing Commissioner (ii) Deputy Commissioner (iii) Chief Engineer and Secretary, shall send a panel of three names to the Housing Board and the Housing Board shall recommend the name of the reqiured Officer"

That the following proviso shall be added to Sub-Section 7 of the proposed Section 10:

"Provided that the Commissioner shall be place the report of the action taken by him before the Board at the earliest meeting of the Board."

That in the proposed section 10 after sub-section (7) the following new sub-section (8) shall be added.

"The Housing Commissioner, Chief Engineer and Secretary shall place a report of the action taken by them for the ratification of the Board."

The Amendment were negatived

MADAM SPEAKER: I will put clause 7 to the vote of the House.

The question is:

"That clause 7 do stand part of the Bill.

The motion was adopted.

Cla ss 7 was added to the Bill.

MADAM SPEAKER: There are no amendments to clause 8.

The question is;

"That clause 8 do stand part of the Bili."

The motion was adopted.

Clause 8 was added to the Bills."

CLAUSE 9,

SRI. T R. SHAMANNA: I beg to more that after the proposed Section 16, the following new section shall be added:

"16A. That the State Government shall place notification for the ratification of the Board.'

MADAM SPEAKER: Amendment moved. After proposed Section 16, the following new section shall be added.

''16A That the State Government shall place the notification for the ratification of the Board.'

† ಶ್ರೀ ಟಿ, ಆರ್. ಶಾಮಣ್ಣ: ಕ್ಲಾಜ್ ೧೬ ರಲ್ಲಿ ಡೆಲಿಗೇಷನ್ ಆಫ್ ಪವರ್ಸ್ ವಿಚಾರವನ್ನು ಹೇಳಿದ್ದಾರೆ. ಎಲ್ಲ ಅಧಿಕಾರವನ್ನೂ ಸರ್ಕಾರದವರೇ ತೆಗೆದುಕೊಂಡು ಹೌಸಿಂಗ್ ಕಮಿಷನರಿಗೆ ಅಧಿಕಾರವನ್ನು ಕೊಡುವುದಾದರೆ ಬೋರ್ಡನ್ನು ಏಕೆ ಸೃಷ್ಟಿ ಮಾಡಬೇಕು? ಭತ್ಯ, ಕಾರು, ಮನೆ ಏಕೆ ಕೊಡಬೇಕು? ಸರ್ಕಾರದವರು ಒಬ್ಬ ಕಮಿಷನರನ್ನು ನೇಮಕ ಮಾಡಿ ಪ್ರತ್ಯೇಕ ಇಲಾಖೆಯಾಗಿ ಮಾಡಿದರೆ ಸರ್ಕಾರದವರು ಹೇಳತಕ್ಕ ಪ್ರಕಾರ ಚೆನ್ನಾಗಿ ಕೆಲಸ ಮಾಡುವುದಕ್ಕಾಗುತ್ತದೆ: ಹಿಂದೆ ಅನೇಕ ಡಿಪಾರ್ಟ್‌ಮೆಂಟುಗಳಿಗೆ ಬದಲಾಗಿ ಬೋರ್ಡುಗಳನ್ನು ಮಾಡಿದ್ದಾರೆ. ಸರ್ಕಾರದ ನೇರವಾದ ಅಧಿಕಾರದಲ್ಲಿದ್ದಾಗಲೇ ಬಹಳ ಚೆನ್ನಾಗಿತ್ತು, ಕಡಿಮೆ ಖರ್ಚಿನಲ್ಲಿ ಕೆಲಸಕಾರ್ಯಗಳು ನಡೆಯುತ್ತಿದ್ದುವು. ಬೋರ್ಡುಗಳ ಸ್ಥಾಪನೆಯಾದ ಮೇಲೆ ಕೆಲಸ ಚೆನ್ನಾಗಿ ನಡೆಯುತ್ತಿಲ್ಲ ಮತ್ತು ಕೆಲವರಿಗೆ ಅನುಕೂಲ ಮಾಡಿಕೊಡುವುದಕ್ಕಾಗಿಯೇ ಇವುಗಳನ್ನು ಮಾಡುತ್ತಿದ್ದಾರೆ ಮತ್ತು ಜನಗಳಿಗೆ ಅದರಿಂದ ಏನೂ ಅನುಕೂಲ ಮಾಡುವುದಕ್ಕಾಗಿಲ್ಲ. ತೊಂದರೆಗಳೂ ಹೆಚ್ಚಾದುವು. ಮಾನ್ಯ ಮಂತ್ರಿಗಳಿಗೆ ಸ್ವಲ್ಪ ತೊಂದರೆಯಾದರೂ ಸಹ ಬೋರ್ಡನ್ನು ತೆಗೆದು ಹಾಕಿ ಅದರ ಬದಲು ಸರ್ಕಾರ ಒಂದು ಇಲಾಖೆಯನ್ನಾಗಿ ಇದನು ನಡೆಸಿಕೊಂಡು ಬರುವುದು ಒಳ್ಳೆಯದು. ಇದರಿಂದ ಖರ್ಚು ಕಡಮೆಯಾಗುವುದಲ್ಲದೆ ಜನಗಳಿಗೆ ತೊಂದರೆಯೂ ಕಡಿಮೆಯಾಗುತ್ತದೆ. ಸರ್ಕಾರದವರು ಡೆಲಿಗೇಷನ್ ಆಫ್ ಪವರ್ಸ್ ಇಟ್ಟುಕೊಳ್ಳುವುದು ಒಳ್ಳೆಯದಾದರೂ ಅದನ್ನು ಬೋರ್ಡಿನ ಮುಂದೆ ಇಟ್ಟು ರ್‍ಯಾಟಿಫೈ ಮಾಡಿಸಬೇಕು. ಇಲ್ಲವಾದರೆ ಬೋರ್ಡಿನಲ್ಲಿ ನಂಬಿಕೆ ಇಲ್ಲ ಎಂದಾಗುತ್ತದೆ. ಆದ್ದರಿಂದ ನನ್ನ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

† ಶ್ರೀ ಕೆ ಎಚ್. ರಂಗನಾಥ್: ಹಿಂದಿನ ಕಾನೂನಿನಲ್ಲಿ ಕಂಟ್ರಾಕ್ಟ್ ವಗೈರೆ ಮಾಡಿಕೊಳ್ಳುವುದಕ್ಕೆ ಅಧಿಕಾರವನ್ನು ಕಮಿಷನರಿಗೆ ಬೋರ್ಡಿನವರು ಕೊಡಬಹುದು ಎಂದು ಇತ್ತು ಈಗ ಅದನ್ನು ಬದಲಾವಣೆ ಮಾಡುತ್ತಿದ್ದೇವೆ. ಅಧಿಕಾರವನ್ನು ಸೆಂಟ್ರಲೈಸ್ ಮಾಡುತ್ತಿದ್ದೇವೆ, ಡಿವಿಜನಲ್ ಮಟ್ಟದಲ್ಲಿರುವಂಥ ಅಧಿಕಾರಿಗಳಿಗೆ ಕೆಲವು ಅಧಿಕಾರಗಳನ್ನು ಕೊಡಲು ಅವಕಾಶವಿರುವಂತೆ ಈ ಬದಲಾವಣೆಯನ್ನು ಮಾಡಲಾಗಿದೆ. ಕಂಟ್ರಾಕ್ಟ ಮಾಡಿಕೊಳ್ಳುವುದಾಗಲೀ ಹಣಕಾಸನ್ನು ಮಂಜೂರು ಮಾಡುವುದಾಗಲೀ ಯಾರು ಮಾಡಬಹುದು ಎನುವುದಕ್ಕೆ ಕಮಿಷನರು ಬೇರೆಯವರಿಗೆ ಅಥರೈಸ್ ಮಾಡುವುಕ್ಕೆ ಅಧಿಕಾರವನ್ನು ೧೬ನೇ ಸೆಕ್ಷನಲ್ಲಿ ಕೊಡಲಾಗಿದೆ. ಮಾನ್ಯ ಸದಸ್ಯರು ಏನು ತಿದ್ದುಪಡಿಯನ್ನು ತಂದಿದ್ದಾರೆ ಅದು ಸಾಧುವಾದುದಲ್ಲ ಮತ್ತು ಅದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ ಹೊಸದಾಗಿ ಸೆಕ್ಷನ್ ೧೬ ಏನು ಹಾಕಿದ್ದೇವೆ ಆದರಿಂದ ಕಮಿಷನರು ತಮ್ಮ ಅಧಿಕಾರವನ್ನು ಬೇರೆಯವರಿಗೆ ಡೆಲಿಗೇಟ್ ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟಿರತಕ್ಕದ್ದಾಗಿದೆ:

MADAM SPEAKER—:I will put the amendment to the vote of the House.

The question is:

"After the proposed section 16, the following new section shall be added:

"16A. That the State Government shall place the notification for the ratification of the Board.'

The Amendment was negatived.

MADAM SEAKER: I will put clause 9 to the vote of the House
The question is:
'The clause 9 do stand part of the Bill,'

The motion was adopted.

Clause 9 was added to the Bill.

Clauses 10 to 19

MADAM SPEAKER.—I will now put Clauses 10 to 19.

The question is:—"That Clauses 10 to 19, both inclusive, do stand part of the Bill"

The motion was adopted

Clauses 10 to 19, both inclusive were added to the Bill.

MADAM SPEAKER,—There is an amendment to Clause 1 by Sri T. R. Shamanna. He may move it.

SRI T. R. SHAMANNA.—I beg to move the following amendment.

"That in sub-clause (2) for the words and figures "The third day of November 1973" the words and figures "Nineteenth day of March 1974" shall be substituted."

MADAM SPEAKER.—Amendment moved.

"That in sub-clause (2) for the words and figures "The third day of November, 1973" the words and figures "Nineteenth day of March 1974" shall be substituted."

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಅಧ್ಯಕ್ಷರೇ ನಾನು ತಂದಿರತಕ್ಕ ತಿದ್ದುಪಡಿಯಲ್ಲಿ ಹಿಂದೆ ಇದ್ದಂತೆ ನವಂಬರು ಮೂರನೇ ತಾರೀಖು ೧೯೭೩ ರಿಂದ ಇದು ಜಾರಿಗೆ ಬರಬೇಕೆಂದು ರಿಟ್ರಾಸ್ ಪೆಕ್ಟೀವ್ ಆಗಿ ಕೊಡುವುದು ಸರಿಯಲ್ಲ, ಇದನ್ನು ಈಗ ತಂದಿರುವುದರಿಂದ ಇವನ್ನು ಮಾರ್ಚಿ ೧೯ನೇ ತಾರೀಖು ೧೯೭೪ ರಿಂದ ತಂದಂತೆ ಮಾಡಿದರೆ ಸರಿಯಾಗಿರುತ್ತೆ ಎನ್ನುವುದು ನನ್ನ ವಾದ. ಏಕೆಂದರೆ ಹಿಂದಿನ ಚೇರ್ಮನ್‌ರವರು ಇಲ್ಲಿ ಯುವರೆಗೆ ಎಷ್ಟೋ ಕೆಲಸಗಳನ್ನು ಮಾಡಿದ್ದಾರೆ. ಇದರಲ್ಲಿ ರಿಟ್ರಾಸ್ ಪೆಕ್ಟೀವ್ ಎಫೆಕ್ಟು ಎಂದು ಮಾಡಿದರೆ ಹಿಂದೆ ಮಾಡಿದ ಅನೇಕ ಕೆಲಸಗಳನ್ನೂ ಕಮಿಷನರ್‌ರವರು ತನಿಖೆ ಮಾಡಲು ಹೋಗಬಹುದು. ಇದಕ್ಕಾಗಿ ರಿಟ್ರಾಸ್‌ಪೆಕ್ಟೀವ್ ಎಫೆಕ್ಟು ಬೇಡ ಇದನ್ನು ೧೯೭೪ರ ಮಾರ್ಚಿಯಿಂದ ತರಬೇಕೆಂದು ನಾನು ತಂದಿರುವ ತಿದ್ದುಪಡಿ. ಇದರಿಂದ ಇಲ್ಲದ ತೊಂದರೆಗಳು ಬರಬಹುದು ಎಂದು ತಂದಿದ್ದೇನೆ. ಇದರ ಜೊತೆಗೆ ಇನ್ನೊಂದು ಸಣ್ಣ ಅರಿಕೆ. ಇದಕ್ಕೆ ಇದು ಸಂಬಂಧವಿಲ್ಲದಿದ್ದರೂ ಇದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಹಿಂದುಳಿದವರಿಗೋಸ್ಕರವಾಗಿ ಹಾಗೂ ದೀನ ದಲಿತರಿಗಾಗಿ ಸಹಾಯ ಮಾಡಬೇಕು ಎಂದು ಹೇಳುವುದಕ್ಕೆ ನನ್ನ ಪೂರ್ಣ ಒಪ್ಪಿಗೆಯೂ ಇದೆ ಅನೇಕರು ಸೈಟುಗಳನ್ನು ಕೊಂಡು ಮನೆಗಳನ್ನು ಕಟ್ಟಲು ಹೌಸಿಂಗು ಬೋರ್ಡುಗಳಿಗೆ ಸಾಲಕ್ಕೆ ಅರ್ಜಿಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಕೆಲವರಿಗೆ ಇನ್ನೂ ಪೂರ್ತಿ ಸಹಾಯ ಸಿಗಲಿಲ್ಲ. ಹಿಂದುಳಿದ ವರ್ಗದವರ ಜೊತೆಯಲ್ಲಿ

ಮಧ್ಯಮ ವರ್ಗದವರೂ ಇರುವುದರಿಂದ ಇವರ ಬಗ್ಗೆ ನಮ್ಮ ಮಾನ್ಯ ಮಂತ್ರಿಗಳು ಸ್ವಲ್ಪ ಉದಾರವಾಗಿ ಸಹಾಯ ಮಾಡಿ ಅವರಿಗೆ ಮನೆ ಕಟ್ಟಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದರಲ್ಲಿ ಯಾರು ಯಾರಿಗೆ ಸರಿಯಾದ ಅರ್ಹತೆಗಳಿವೆಯೋ ಅಂತಹವರಿಗೆ ಮಾತ್ರ ಸಾಕಷ್ಟು ಅನುಕೂಲಗಳನ್ನು ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ಬೇಕಾದರೆ ನಾನು ಈಗ ತಂದಿರುವ ತಿದ್ದುಪಡಿಯನ್ನೂ ವಾಪಸಂತೆಗೆದುಕೊಳ್ಳುತ್ತೇನೆ.

† ಶ್ರೀ ಕೆ. ಹೆಚ್. ರಂಗನಾಥ್.—ಅಧ್ಯಕ್ಷರೇ ಈ ತಿದ್ದುಪಡಿ ಒಪ್ಪಲು. ಸಾಧ್ಯವಿಲ್ಲಮಾನ್ಯ ಸದಸ್ಯರೂ ವಾಪಸು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಇನ್ನೊಂದು ಬೇರೆ ಸಂಗತಿ ಹೇಳಿದರು. ಇದನ್ನು ವಿಚಾರ ಮಾಡುತ್ತಿದ್ದೇವೆ. ಈಗಲೇ ಏನನ್ನೂ ಹೇಳಲು ಸಾಧ್ಯವಿಲ್ಲ. ಸರಕಾರ ಜನರಿಗೆ ತೊಂದರೆ ಮಾಡಬೇಕೆಂದು ಏನೂ ಉದ್ದೇಶವಿಲ್ಲ. ಇದನ್ನು ವಿಚಾರ ಮಾಡುತ್ತೇವೆ ಎಂದು ಇಷ್ಟು ಹೇಳುತ್ತೇನೆ.

MADAM SPEAKER.—What does the Hon. Member propose to do?

SRI T. R. SHAMANNA.—I beg leave of the House to withdraw the amendment. I do not press my amendment.

The amendment was, by leave, withdrawn.

MADAM SPEAKER.—I will put Clause etc. to the House.

The question is.—"That Clause 1, the long title, the preamble and the Enacting Formula do stand part of the Bill."

The motion was adopted

Clause 1, the long title the preamble and the Enacting Formula were added to the Bill.

Motion to Pass

SRI K H. RANGANATH.—Madam, I move :—

"That the Karnataka Housing Board (Amendment) Bill, 1974 be passed."

MADAM SPEAKER.—The question is:—

"That the Karnataka Housing Board (Amendment) Bill, 1974 be passed."

The motion was adopted and the Bill was passed.

MADAM SPEAKER.—The House stands adjourned to meet again at 1-30 P.M.

The House adjourned at Fifteen Minutes past Twelve of the Clock and reassembled at Thirty Six Minutes past One of the Clock.

(Madam Speaker in the Chair)